ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಿಂದ ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಗಳನ್ನು ಸ್ಥಳಾಂತರ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

08 ಡಿಸೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 266 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ನವಲತ್ತಾಗಿದೆ ನಯವಾಗಿದ್ದೇವೆ » 2



ಹಿರೀಸಾವೆ ಆರೋಗ್ಯ ಕೇಂದ್ರದ ನವೀಕರಣಕ್ಕೆ ಅನುದಾನ » 3



ಗೋವಾ ನೈಟ್ ಕ್ಲಬ್ ಅಗ್ನಿ ಅವಘಡಕ್ಕೆ 25 ಜನರ ಸಾವು » 4


# ಇಂದಿನಿಂದ ಬೆಳಗಾವಿ ಚಳಿಗಾಲದ ಅಧಿವೇಶನ

## 21 ಕೋ. ರೂ. ವೆಚ್ಚ ಅಂದಾಜು | ಭದ್ರತೆಗೆ 6 ಸಾವಿರ ಪೊಲೀಸರು | ಕಳೆದ ವರ್ಷ 15.30 ಕೋ.ರೂ. ವೆಚ್ಚ

• ಪ್ರಜೋದಯ ವರದಿ

**ಬೆಂಗಳೂರು:** ಚಳಿಗಾಲದ ಅಧಿವೇಶನ ಡಿ.8 ರಿಂದ 10 ದಿನಗಳ ಕಾಲ ನಡೆಯಲಿದ್ದು, ಕುಂದಾ ನಗರಿ ಬೆಳಗಾವಿ ಸಜ್ಜಾಗಿದೆ.

ಬೆಳಗಾವಿಯಲ್ಲಿ ನಡೆಯುತ್ತಿರುವ 14ನೇ ಅಧಿವೇಶನ ಇದಾಗಿದೆ. ಈ ಬಾರಿ 21 ಕೋ. ರೂ. ವೆಚ್ಚ ಅಂದಾಜು ಮಾಡಲಾಗಿದೆ. ಕಳೆದ ವರ್ಷ 15.30 ಕೋ. ರೂ. ಖರ್ಚಾಗಿತ್ತು. ಸುವರ್ಣಸೌಧಕ್ಕೆ ಹೆಚ್ಚುವರಿ ರಕ್ಷಣೆ ಮತ್ತು ಅಧಿವೇಶನಕ್ಕೆ ಆಗಮಿಸುವವರಿಗೆ ಉತ್ತಮ ಆಹಾರ ಪೂರೈಸಲು ಹೆಚ್ಚುವರಿ ಖರ್ಚು ಮಾಡಲಾಗುತ್ತಿದೆ.

ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಇಡೀ ಸರ್ಕಾರವೇ ಬೆಳಗಾವಿಯಲ್ಲಿ ಮೊಕ್ಕಾಂ ಹೂಡಿದರೂ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಆದ್ಯತೆ ನೀಡುವುದಿಲ್ಲವೆಂಬ ಆರೋಪ ಕೇಳುತ್ತಲೇ ಇದೆ. ನೆಪ ಮಾತ್ರಕ್ಕೆ ಎಂಬಂತೆ ಕೊನೆಯ 2 ದಿನ ಉತ್ತರ ಕರ್ನಾಟಕ ಭಾಗದ ಚರ್ಚೆಗೆ ಸಮಯ ನೀಡಲಾಗುತ್ತದೆ. ಉಳಿದಂತೆ ಹೆಚ್ಚಿನ ಅವಧಿಯಲ್ಲಿ ಇತರ ಚರ್ಚೆಗಳು, ಗಲಾಟೆ, ಗದ್ದಲವೇ ಗಮನ ಸೆಳೆಯುತ್ತದೆ.

ಅಧಿವೇಶನದಲ್ಲಿ ಸರ್ಕಾರವನ್ನು ಕಟ್ಟಿ ಹಾಕಲು ಪ್ರತಿಪಕ್ಷಗಳಾದ ಬಿಜೆಪಿ ಹಾಗು ಜೆಡಿಎಸ್ ತಯಾರಿ ನಡೆಸಿವೆ. ಕಬ್ಬು ಬೆಳೆಗಾರರು, ಮೆಕ್ಕೆಜೋಳ ಬೆಳೆಗಾರರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ವಿಪಕ್ಷಗಳು ಮುಂದಾಗಿವೆ. ಇದು ಯಾವ ಸ್ವರೂಪದಲ್ಲಿ ಇರಲಿದೆ ಎಂಬುದನ್ನು ನೋಡಬೇಕಾಗಿದೆ. ಅನೇಕ ರೈತ ಸಂಘಟನೆ, ಸಾಮಾಜಿಕ ಸಂಘಗಳು ಸರ್ಕಾರದ ವಿರುದ್ಧ ಹೋರಾಟ ನಡೆಸಲು ಸಿದ್ಧತೆ ಮಾಡಿಕೊಂಡಿವೆ.



**ಭತ್ಯೆ, ಉಚಿತ ಊಟ ಬೇಡ**

ಸ್ಪೀಕರ್ ಯು.ಟಿ.ಖಾದರ್ ಅಧಿಕಾರ ಸ್ವೀಕಾರ ಮಾಡಿದ ಬಳಿಕ ಶಾಸಕರಿಗೆ ಹಲವು ಸೌಕರ್ಯ ಕಲ್ಪಿಸಿದ್ದಾರೆ. ವಿಧಾನಸಭೆ ಅಧಿವೇಶನಕ್ಕೆ ಆಗಮಿಸುವ ಶಾಸಕರಿಗೆ ಉಚಿತ ಊಟ, ನಿದ್ದೆ ಮಾಡಲು ರಿಕ್ಲೈನರ್ ಕುರ್ಚಿ ಹಾಗು ಮಸಾಜ್ ಕುರ್ಚಿ ವ್ಯವಸ್ಥೆ ಮಾಡಲಾಗಿದೆ. ಸಮಯಾವಕಾಶ ಉಳಿಸಿ ಹೆಚ್ಚಿನ ಚರ್ಚೆ ಆಗಲಿ ಎಂಬ ಉದ್ದೇಶ ಎಂಬುದು ಸ್ಪೀಕರ್ ಸಮರ್ಥನೆಯಾಗಿದೆ.

ಈ ಬಾರಿ ಜೆಡಿಎಸ್ ಶಾಸಕ ಶರಣಗೌಡ ಕಂದಕೂರು ಅವರು ನನಗೆ ಉಚಿತ ಊಟ, ಭತ್ಯೆ ಏನೂ ಬೇಡ ಎಂದಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಆಗುತ್ತಿಲ್ಲ, ನಮಗೆ ಮಾತನಾಡಲು ಅವಕಾಶ ಸಿಗುತ್ತಿಲ್ಲ. ಯಾವ ಸೌಲಭ್ಯ ಪಡೆದುಕೊಳ್ಳುವುದಿಲ್ಲ ಎಂದಿದ್ದಾರೆ.

### ನಾಳೆ ಸುವರ್ಣಸೌಧ ಮುತ್ತಿಗೆ

ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಡಿ. 9 ರಂದು ಸುವರ್ಣಸೌಧಕ್ಕೆ ಬಿಜೆಪಿ ಹೆಚ್ಚಿನ ಸಂಖ್ಯೆಯ ರೈತರೊಂದಿಗೆ ಮುತ್ತಿಗೆ ಹಾಕಲಿದೆಯೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದ್ದಾರೆ.

ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಮತ್ತು ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವ ಉದ್ದೇಶದಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಬಗ್ಗೆ ಜೆಡಿಎಸ್ ನಾಯಕರೊಂದಿಗೆ ಚರ್ಚಿಸಿಲ್ಲ. ಅಧಿವೇಶನದಲ್ಲಿ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಕೇವಲ ನೆಪ ಮಾತ್ರಕ್ಕೆ ಒಂದು ದಿನ ನಡೆಯುತ್ತವೆ. ಆದರೆ, ಈ ಬಾರಿ ಅದನ್ನು ಗಂಭೀರವಾಗಿ ಪರಿಗಣಿಸಿ, ಅಧಿವೇಶನದ ಆರಂಭದ ದಿನಗಳಲ್ಲಿಯೇ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದೇವೆಂದು ಸುದ್ದಿಗಾರರಿಗೆ ಹೇಳಿದರು.

**ಭದ್ರತೆಗೆ 6,000 ಪೊಲೀಸರು**

ಅಧಿವೇಶನ ಹಿನ್ನಲೆ ಅಹಿತಕರ ಘಟನೆಗಳು ನಡೆಯದಂತೆ ಈ ಬಾರಿ ಹೆಚ್ಚುವರಿ ಭದ್ರತೆ ನಿಯೋಜಿಸಲಾಗಿದೆ. ದೆಹಲಿ ಕೆಂಪು ಕೋಟೆ ಬಳಿ ಕಾರು ಸ್ಫೋಟ ಪ್ರಕರಣ ಬಳಿಕ ಅಧಿವೇಶನದ ವೇಳೆ ನಿಗಾ ವಹಿಸುವಂತೆ ಕೇಂದ್ರ ಗುಪ್ತಚರ ಇಲಾಖೆ ಮಾಹಿತಿ ನೀಡಿದ್ದು ಸುವರ್ಣಸೌಧದ ಸುತ್ತ ಮುತ್ತ ಹೈ ಅಲರ್ಟ್ ಘೋಷಿಸಲಾಗಿದೆ. ಬೆಳಗಾವಿ ನಗರದಲ್ಲಿ 6 ಸಾವಿರ ಪೊಲೀಸರ ನಿಯೋಜನೆ ಮಾಡಿದ್ದು, ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ನೇತೃತ್ವದಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿದೆ. 6 ಎಸ್‌ಪಿ ದರ್ಜೆಯ, 146 ಹಿರಿಯ, 3,820 ಪೊಲೀಸ್ ಸಿಬ್ಬಂದಿ, 500 ಹೋಂ ಗಾರ್ಡ್ಸ್, 8 ಕ್ಷಿಪ್ರ ಕಾರ್ಯಪಡೆ, 10 ಡಿಎಆರ್ ತುಕಡಿ, 35 ಕೆಎಸ್‌ಆರ್‌ಪಿ ತುಕಡಿ, 1 ಬಿಡಿಡಿಎಸ್ ತಂಡ, 1 ಗರುಡ ಫೋರ್ಸ್, 16 ವಿಧ್ವಂಸಕ ಕೃತ್ಯ ತಪಾಸಣೆ ತಂಡಗಳು ನಿಯೋಜನೆಗೊಂಡಿವೆ. ಸುವರ್ಣ ವಿಧಾನಸೌಧ ಸುತ್ತಮುತ್ತ ಪೊಲೀಸ್ ಸರ್ಪಗಾವಲು ಇರಲಿದ್ದು, ಸುವರ್ಣ ಗಾರ್ಡನ್, ಅಲಾರವಾಡ ಬಳಿ ಪ್ರತಿಭಟನೆಗಳಿಗೆ ಸ್ಥಳ ನಿಗದಿಪಡಿಸಲಾಗಿದೆ.

# 6ನೇ ದಿನವೂ ಮುಂದುವರಿದ ಇಂಡಿಗೊ ಅಡಚಣೆ



• ಪ್ರಜೋದಯ ವರದಿ

**ನವದೆಹಲಿ:** ಸತತ ಆರನೇ ದಿನವಾದ ಭಾನುವಾರವೂ ಇಂಡಿಗೊ ಏರ್ ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿ ಅಡಚಣೆ ಮುಂದುವರಿದಿದೆ. ದೆಹಲಿ, ಕೋಲ್ಕತ್ತಾ, ಹೈದರಾಬಾದ್ ಸೇರಿ ದೇಶದಾದ್ಯಂತ ಹಲವು ವಿಮಾನ ನಿಲ್ದಾಣಗಳಲ್ಲಿ 400ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದಾಗಿದ್ದು, ಪ್ರಯಾಣಿಕರು ತೊಂದರೆ ಅನುಭವಿಸಿದ್ದಾರೆಂದು ವರದಿಯಾಗಿದೆ.

ದೆಹಲಿ ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ ಮತ್ತು ಇಲ್ಲಿಂದ ಹೊರಡಬೇಕಿದ್ದ ಒಟ್ಟು 109 ಇಂಡಿಗೊ ವಿಮಾನಗಳು ರದ್ದಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತೆಲಂಗಾಣದ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ ಮತ್ತು ಆಗಮಿಸಬೇಕಿದ್ದ ಒಟ್ಟು 115 ಇಂಡಿಗೊ ವಿಮಾನಗಳು ರದ್ದಾಗಿವೆ ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕೋಲ್ಕತ್ತದಲ್ಲಿ 76, ಪುಣೆಯಲ್ಲಿ 25, ಅಹಮದಾಬಾದ್‌ನಲ್ಲಿ 20, ಅಗರ್ತಲಾ ವಿಮಾನ ನಿಲ್ದಾಣದಲ್ಲಿ 6 ಇಂಡಿಗೊ ವಿಮಾನಗಳ ಹಾರಾಟ ರದ್ದಾಗಿದೆ. ಒಟ್ಟಾರೆ ಶೇ. 33ರಷ್ಟು ಇಂಡಿಗೊ ವಿಮಾನಗಳ ಹಾರಾಟ ರದ್ದಾಗಿದೆ. ವಿಮಾನ ಕಾರ್ಯಾಚರಣೆಯಲ್ಲಿ ಉಂಟಾದ ವ್ಯತ್ಯಯದ ಬಗ್ಗೆ 24 ಗಂಟೆಯೊಳಗೆ ವಿವರಣೆ ನೀಡಿ ಎಂದು ಇಂಡಿಗೊ ಸಿಇಒ ಪೀಟರ್ ಎಲ್ಬರ್ಸ್ ಹಾಗು ವ್ಯವಸ್ಥಾಪಕ ಈಸಿಡ್‌ರೆ ಪೊರ್‌ಖೆರಸ್ ಅವರಿಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ.


# ಮಲೆನಾಡಿನಲ್ಲಿ ಹೆಚ್ಚಿದ ಕಾಫಿ ಕಳವು ಪ್ರಕರಣ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಫಿ ಕಳವು ಪ್ರಕರಣಗಳು ಹೆಚ್ಚುತ್ತಿದ್ದು, ಬೇಲೂರು ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಮತ್ತೊಂದು ಕಳವು ಘಟನೆ ಬೆಳಕಿಗೆ ಬಂದಿದೆ.

ಮಧು ಎಂಬುವವರಿಗೆ ಸೇರಿದ ಕಾಫಿ ಫಸಲು ಕಳ್ಳರ ಗುರಿಯಾಗಿದ್ದು, ತೋಟದಲ್ಲಿ ಬಿಡಿಸಿದ 20 ಮೂಟೆ ಕಾಫಿ ಹಣ್ಣುಗಳನ್ನು ಕಳ್ಳರು ಕದ್ದೊಯ್ದಿರುವುದು ಭಾನುವಾರ ಬೆಳಕಿಗೆ ಬಂದಿದೆ. ಕಾಫಿ ಹಣ್ಣು ಬಿಡಿಸಿ, ಟಾರ್ಪಾಲ್ ಮುಚ್ಚಿ ಮನೆಗೆ ಹೋದ ಮಧು ಅವರು ಬೆಳಿಗ್ಗೆ ಒಣಗಿಸಲು ಬಂದಾಗ ಚೀಲಗಳು ತೆರೆದುಕೊಂಡಿರುವುದು ಗಮನಕ್ಕೆ ಬಂದಿದೆ.

ಕಳುವಾಗಿರುವ ಕಾಫಿಯ ಮೌಲ್ಯ ಸುಮಾರು 1 ಲಕ್ಷ ರೂ. ಎಂದು ಅಂದಾಜಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಕಾಫಿಗೆ ಉತ್ತಮ ಬೆಲೆ ಸಿಗುತ್ತಿರುವ ಹಿನ್ನಲೆಯಲ್ಲಿ ಕಳವು ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿವೆ ಎಂದು ಸ್ಥಳೀಯ ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ಬೇಲೂರು ತಾಲ್ಲೂಕಿನಲ್ಲೇ ಇದು ಎಂಟನೇ ಕಾಫಿ ಕಳವು ಪ್ರಕರಣವಾ ಗಿದ್ದು, ರೈತರಲ್ಲಿ ಭದ್ರತೆ ಕುರಿತು ಗಂಭೀರ ಚಿಂತೆ ಉಂಟಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.



# ಸಂವಿಧಾನ ಮೌಲ್ಯಗಳ ರಕ್ಷಣೆಗೆ ಮೋದಿ ಸರ್ಕಾರ ಬದ್ಧ: ಲಾಲ್ ಸಿಂಗ್

• ಪ್ರಜೋದಯ ವರದಿ

**ಹಾಸನ:** ಸರ್ವರ ಏಳಿಗೆಗಾಗಿ ಡಾ.ಬಿ. ಆರ್.ಅಂಬೇಡ್ಕರ್ ಅವರ ಸಂವಿಧಾನದ ಮೌಲ್ಯಗಳನ್ನು ಕಾಪಾಡುವುದರ ಜೊತೆಗೆ ಆಶಯಗಳನ್ನು ಈಡೇರಿಸುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಾಡುತ್ತಿದೆಯೆಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಅವರು ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಭಾನುವಾರ ನಡೆದ ಸಂವಿಧಾನ ದಿವಸ್ ಹಾಗು ಅಂಬೇಡ್ಕರ್ ಪರಿನಿರ್ವಾಣ ದಿನದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರ ಸಮಾಜಪರ ಹೋರಾಟ ಮತ್ತು ರಾಷ್ಟ್ರ ನಿರ್ಮಾಣಕ್ಕೆ ನೀಡಿದ ಅಸಾಮಾನ್ಯ ಕೊಡುಗೆಯನ್ನು ಯಾರೂ ಮರೆಯುವಂತಿಲ್ಲವೆಂದರು.



ದಲಿತರು, ಕಾರ್ಮಿಕರು, ಮಹಿಳೆಯರು ಸೇರಿ ನಿರ್ಗತಿಕ ವರ್ಗಗಳಿಗೆ ನ್ಯಾಯ ಹಾಗು ಹಕ್ಕುಗಳನ್ನು ಒದಗಿಸಲು ಅಂಬೇಡ್ಕರ್ ಮಾಡಿದ ಹೋರಾಟ ಅವಿಸ್ಮರಣೀಯ. ಭಾರತದ ಸಂವಿಧಾನ ದೇಶದ ಕೋಟ್ಯಾಂತರ ಜನರಿಗೆ ರಕ್ಷಣಾ ಕವಚದಂತೆ ಕೆಲಸ ಮಾಡುತ್ತಿದೆ. ಸಾಮಾಜಿಕ ನ್ಯಾಯ, ಅವಕಾಶಗಳ ಸಮಾನತೆಯನ್ನೂ ಒದಗಿಸಿದೆ ಎಂದು ಹೇಳಿದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಂಬೇಡ್ಕರ್ ಕನಸು ಕಂಡ ದೇಶವನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಅಂಬೇಡ್ಕರ್ ಅವರಿಗೆ ಎನ್‌ಡಿಎ ನೀಡಿರುವಷ್ಟು ಗೌರವವನ್ನು ಬೇರೆ ಯಾವ ಪಕ್ಷಗಳು ನೀಡಿಲ್ಲವೆಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಇಡೀ ಪ್ರಪಂಚದಲ್ಲಿ ಅತ್ಯುನ್ನತ, ಬಲಿಷ್ಟ ಮತ್ತು ಸಮಗ್ರ ಸಂವಿಧಾನವನ್ನು ದೇಶಕ್ಕೆ ನೀಡಿದವರು ಡಾ. ಬಿ.ಆರ್.ಅಂಬೇಡ್ಕರ್. ಪಾಕಿಸ್ತಾನ, ಬಾಂಗ್ಲಾದೇಶ, ಅಫಘಾನಿಸ್ತಾನ ಹೀಗೆ ಹಲವು ದೇಶಗಳ ಅಸ್ಥಿರ ಪರಿಸ್ಥಿತಿಯನ್ನು ನೋಡಿದರೆ ಭಾರತ ಎಷ್ಟು ಬಲಿಷ್ಠ ಎಂಬುದು ಗೊತ್ತಾಗುತ್ತದೆ. ಉತ್ಕೃಷ್ಟ ಸಂವಿಧಾನ ಒಂದು ರಾಷ್ಟ್ರವನ್ನು ಹೇಗೆ ರಕ್ಷಿಸುತ್ತದೆಂಬುದಕ್ಕೆ ಭಾರತ ಅತ್ಯುತ್ತಮ ನಿದರ್ಶನ ಎಂದರು.

ಸಂವಿಧಾನ ಬರೆಯುವುದು ಸುಲಭದ ಕಾರ್ಯವಲ್ಲ. ಸಾಕಷ್ಟು ಅಪಮಾನ ಸಹಿಸಿ, ನೂರಾರು ಗ್ರಂಥಗಳನ್ನು ಓದಿ ಅಂಬೇಡ್ಕರ್ ಸಂವಿಧಾನ ರಚಿಸಿ ಮಹಾನುಭಾವ ಎನಿಸಿಕೊಂಡಿದ್ದಾರೆ. ಅವರು ಸಂವಿಧಾನ ಬರೆಯದಿದ್ದರೆ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಸಿಗುತ್ತಿರಲಿಲ್ಲ. ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು, ಸಮಾಜದ ದುರ್ಬಲ ವರ್ಗಗಳಿಗೆ ಅವಕಾಶ ಇವೆಲ್ಲಾ ಬಾಬಾ ಸಾಹೇಬರು ನೀಡಿದ ಕೊಡುಗೆ ಎಂದರು.

ಬಿಜೆಪಿ ರಾಷ್ಟ್ರೀಯ ಮೋರ್ಚಾ ಕಾರ್ಯಾಧ್ಯಕ್ಷ ಕುಮಾರ್ ನಾಯಕ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಎಸ್.ಡಿ. ಚಂದ್ರು, ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ, ಉಪಾಧ್ಯಕ್ಷ ಶ್ರೀನಿವಾಸ್, ರಾಜ್ಯ ಕಾರ್ಯದರ್ಶಿ ಓಂಕಾರ್, ಪ್ರಶಾಂತ್ ಇತರರಿದ್ದರು.

# ಶಾಸಕ ಸಿಮೆಂಟ್ ಮಂಜುಗೆ ಅವಹೇಳನ: ದೂರು ದಾಖಲು

• ಪ್ರಜೋದಯ ವರದಿ

**ಸಕಲೇಶಪುರ:** ಶಾಸಕ ಸಿಮೆಂಟ್ ಮಂಜು ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಕಾಮೆಂಟ್ ಮಾಡಿದ ಆರೋಪಕ್ಕೆ ಸಂಬಂಧಿಸಿ ಬಿಜೆಪಿ ಕಾರ್ಯಕರ್ತರು ನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಶನಿವಾರ ಹಾಸನದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿವಿಧ ಸಚಿವರ ಉಪಸ್ಥಿತಿಯ ಕಾರ್ಯಕ್ರಮದಲ್ಲಿ ಸಿಮೆಂಟ್ ಮಂಜು ಭಾಷಣ ಮಾಡಿದ್ದರು. ಫೇಸ್‌ಬುಕ್‌ನಲ್ಲಿ ಪೋಸ್ಟ್ ಆಗಿದ್ದ ವಿಡಿಯೋಗೆ ವಸಂತ ಕುಮಾರ್ ಎಂಬ ಹೆಸರಿನ ವ್ಯಕ್ತಿ ಅವಹೇಳನಕಾರಿಯಾಗಿ ಕಾಮೆಂಟ್ ಮಾಡಿದ್ದಾನೆ. ಈ ರೀತಿಯ ಪ್ರತಿಕ್ರಿಯೆ ಶಾಸಕರ ಘನತೆಗೆ ಧಕ್ಕೆ ತರುತ್ತದೆ. ಜೊತೆಗೆ ಕ್ಷೇತ್ರದ ಜನರು ಹಾಗು ಬಿಜೆಪಿ ಕಾರ್ಯಕರ್ತರ ಭಾವನೆಗೆ ನೋವುಂಟು ಮಾಡುತ್ತದೆಂದು ದೂರಿನಲ್ಲಿ ತಿಳಿಸಲಾಗಿದೆ. ಆರೋಪಿಯನ್ನು ಪತ್ತೆ ಹಚ್ಚಿ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಬಾಳ್ಳುಪೇಟೆ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಎಂ.ಎಸ್. ಶಿವಕುಮಾರ್ ದೂರು ನೀಡಿದ್ದಾರೆ. ಬೆಳಗೋಡು ಮಹಾ ಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ಪ್ರದೀಪ್, ಮುಖಂಡರಾದ ನವೀನ್ ಶೆಟ್ಟಿ, ಕಿಟ್ಟಿ ಪುಟ್ಟರಾಜು ಇತರರಿದ್ದರು.

# ಮಕ್ಕಳ ಬೆಳವಣಿಗೆ ಮೇಲೆ ಪೋಷಕರ ನಿಗಾ ಇರಲಿ

• ಪ್ರಜೋದಯ ವರದಿ

**ಹಾಸನ:** ಮಕ್ಕಳನ್ನು ಕಾಲೇಜಿಗೆ ಕಳುಹಿಸಿದರೆ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಪೋಷಕರು ಸುಮ್ಮನಿರುವ ಬದಲು ಪರಾಮರ್ಶೆ ಮಾಡಬೇಕು. ಮಕ್ಕಳ ಬೆಳವಣಿಗೆ ಮೇಲೆ ತಾಯಂದಿರು ನಿಗಾ ವಹಿಸಬೇಕೆಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಅವರು ಹೇಳಿದರು.

ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಪೋಷಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕಾಲೇಜಿನಲ್ಲಿ ಓದಿದ ಸಾವಿರಾರು ಮಕ್ಕಳು ದೇಶ-ವಿದೇಶಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಆಡಳಿತ ಮಂಡಳಿ ಎಲ್ಲಾ ಕ್ರಮ ಕೈಗೊಂಡಿದೆ ಎಂದರು.



ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡಳ್ಳಿ ಜಗದೀಶ್ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಲು ಒಳ್ಳೆಯ ಕಂಪನಿಗಳನ್ನು ಕರೆಸುವ ಹಾಗು ಉದ್ಯೋಗ ಪಡೆಯಲು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತಿದೆ. ನಾಲ್ಕು ಸಾವಿರ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ತಮ್ಮ ಮಕ್ಕಳ ಬಗ್ಗೆ ಏನಾದರೂ ವಿಚಾರಗಳಿದ್ದರೆ ಪ್ರಾಂಶುಪಾಲರು ಹಾಗು ವಿಭಾಗದ ಮುಖ್ಯಸ್ಥರನ್ನು ಖುದ್ದಾಗಿ ಭೇಟಿಯಾಗಿ ಮಾಹಿತಿ ಪಡೆಯಬೇಕೆಂದರು.

ಮಾನಸಿಕ ತಜ್ಞೆ ಡಾ|| ಅನುಪಮಾ ಅವರು ಮಾತಾನಾಡಿ, ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಲು ಅವರಿಗೆ ಸೂಕ್ತ ತಿಳವಳಿಕೆ ನೀಡುವುದು ಪೋಷಕರ ಜವಾಬ್ದಾರಿ. ಒಳ್ಳೆಯವರ ಸಂಗ, ದುಶ್ಚಟಗಳಿಂದ ದೂರವಿರುವುದು, ಅತಿಯಾದ ಮೊಬೈಲ್ ಬಳಕೆ ನಿಷೇಧ, ಸಕಾರಾತ್ಮಕ ಚಿಂತನೆಯಲ್ಲಿ ತೊಡಗುವಂತೆ ನೋಡಿಕೊಳ್ಳಬೇಕು. ಹದಿಹರೆಯದ ವಯಸ್ಸಿನಲ್ಲಿ ಮಕ್ಕಳ ಮನಸ್ಸು ಚಂಚಲವಾಗದಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಂಸ್ಥೆಯ ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ಎವಿಕೆ ಪಿಯು ಕಾಲೇಜು ಉಪಾಧ್ಯಕ್ಷ ನಾಗರಾಜ್ ಜೈನ್, ಪ್ರಭಾರ ಪ್ರಾಂಶುಪಾಲ ಡಾ.ಹೆಚ್.ಎನ್.ನರಸಿಂಹನ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ, ಬಹೂದ್ದೂರು, ಪ್ರಥಮ ವರ್ಷದ ವಿದ್ಯಾರ್ಥಿಗಳ ಡೀನ್ ಡಾ. ಕಲಾವತಿ, ಪರೀಕ್ಷಾ ವಿಭಾಗದ ಡೀನ್ ಡಾ.ಎ.ಎ.ಪ್ರಸನ್ನ, ಇತರರಿದ್ದರು.

# ಕಾರು ಡಿಕ್ಕಿ : ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ** : ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹಿರೀಸಾವೆ ಬಳಿ ಭಾನುವಾರ ನಡೆದಿದೆ.

ಮೃತನನ್ನು ಕಟ್ಟೆಗಹಳ್ಳಿ ಗ್ರಾಮದ ಸುರೇಶ್ (51) ಎಂದು ಗುರುತಿಸಲಾಗಿದೆ. ಸುರೇಶ್ ಅವರು ಬೂಕನಬೆಟ್ಟದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಹೋಗಿ ಊಟ ಮುಗಿಸಿಕೊಂಡು ಬೈಕ್‌ನಲ್ಲಿ ವಾಪಾಸ್ ಬರುತ್ತಿದ್ದಾಗ ಎದುರಿನಿಂದ ಬಂದು ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಸುರೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಚಾಲಕ ವಾಹನವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಸ್ಥಳಕ್ಕೆ ಹಿರೀಸಾವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




# ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಪ್ರಮಾಣ ಹೆಚ್ಚಳ

**ಹಾಸನ:** ಬೆಂಬಲ ಬೆಲೆಯಡಿ ಪ್ರತಿ ಎಕರೆಗೆ 5 ಕ್ವಿಂಟಾಲ್ ಮಾತ್ರ ಮೆಕ್ಕೆಜೋಳ ಖರೀದಿಗೆ ಸಮ್ಮತಿಸಿದ್ದ ಸರ್ಕಾರ ತನ್ನ ಆದೇಶದಲ್ಲಿ ಮಾರ್ಪಾಡು ಮಾಡಿದ್ದು, 12 ಕ್ವಿಂಟಾಲ್ ವರೆಗೆ ಖರೀದಿಸಲು ಸೂಚಿಸಿದೆ.

ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಾಗಿರುವ ರೈತರಿಂದ ಪ್ರತಿ ಎಕರೆಗೆ 5 ಕ್ವಿಂಟಾಲ್ ಗೆ 2400 ರೂ.ನಂತೆ ಖರೀದಿಸಲು ನ. 30 ರಂದು ಆದೇಶಿಸಲಾಗಿತ್ತು. ಅದಕ್ಕೆ ರೈತರಿಂದ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ 12 ಕ್ವಿಂಟಾಲ್‌ಗೆ ಹೆಚ್ಚಿಸಿದೆ. ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಗುಣ ವಾಗಿ ಕೆಲವು ಪ್ರದೇಶ ಗಳಲ್ಲಿ ಗರಿಷ್ಠ 50 ಕ್ವಿಂಟಾಲ್ ತನಕ ಖರೀದಿಗೆ ಸಮ್ಮತಿಸಲಾಗಿದೆ. ಡಿಸ್ಟಲರಿಗಳ ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈ ಪ್ರಕ್ರಿಯೆಯಲ್ಲಿ ಮುತುವರ್ಜಿ ವಹಿಸಬೇಕು. ಬಿಳಿ ಸುಳಿ ರೋಗದಿಂದ ಇಳುವರಿ ನಷ್ಟವಾಗಿದ್ದು, ಮೆಕ್ಕೆಜೋಳ ಖರೀದಿಗೆ ವಿವಿಧ ಜಿಲ್ಲೆಗಳಲ್ಲಿ ಹೋರಾಟಗಳು ನಡೆದಿದ್ದವು. ರೈತರ ಮನವಿಯನ್ನು ಪುರಸ್ಕರಿಸಿರುವ ಸಹ ಕಾರ ಇಲಾಖೆ ಅಧೀನ ಕಾರ್ಯದರ್ಶಿ ಪರಿಷ್ಕೃತ ಆದೇಶವನ್ನು ಭಾನುವಾರ ಹೊರಡಿಸಿದ್ದಾರೆ.

## ಮಲೆನಾಡು ಭಾಗದಲ್ಲಿ ಬಿಗಡಾಯಿಸುತ್ತಿದೆ ಸಮಸ್ಯೆ | ಎಚ್ಚೆತ್ತುಕೊಳ್ಳಬೇಕಿದೆ ಸರ್ಕಾರ

# ಅರಣ್ಯ ಇಲಾಖೆ ಹೊರಗುತ್ತಿಗೆ ನೌಕರರ ಸಂಖ್ಯೆ ಇಳಿಕೆಗೆ ಚಿಂತನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು, ಸಾರ್ವಜನಿಕರ ಪ್ರಾಣ ಹಾಗು ಬೆಳೆಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಸಮಸ್ಯೆ ದಿನದಿಂದ ದಿನಕ್ಕೆ ಜಟಿಲಗೊಳ್ಳುತ್ತಿರುವ ಮಧ್ಯೆಯೇ ಅರಣ್ಯ ಇಲಾಖೆ ಹೊರಗುತ್ತಿಗೆ ನೌಕರರ ಸಂಖ್ಯೆ ಕಡಿತಗೊಳಿಸುತ್ತಿದೆ ಎಂಬ ಮಾಹಿತಿ ತಿಳಿದುಬಂದಿದೆ.

ಸಕಲೇಶಪುರ, ಬೇಲೂರು ಭಾಗದಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಅಂದಾಜು 80 ಆನೆಗಳು ಸಂಚಾರ ನಡೆಸುತ್ತಿದ್ದು, ಬೆಳೆಗಳು ನಾಶವಾಗುತ್ತಿವೆ. ಅರಣ್ಯ ಇಲಾಖೆಗೆ ಖಾಯಂ ಸಿಬ್ಬಂದಿ ಇಲ್ಲದ ಕಾರಣ ಇಟಿಎಫ್, ಆರ್‌ಆರ್‌ಟಿ, ಎಡಿಸಿ ಶಿಬಿರದಲ್ಲಿ 200ಕ್ಕೂ ಹೆಚ್ಚು ನೌಕರರಿದ್ದಾರೆ. ಅವರು ಆನೆಗಳ ಸೆರೆ ಕಾರ್ಯಾಚರಣೆ, ಚಲನವಲನ ಅರಿಯುವುದು, ಕಾಡಾನೆಗಳ ಹಿಮ್ಮೆಟ್ಟಿಸುವುದು ಹೀಗೆ ನಾನಾ ಕೆಲಸಗಳ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗಿದ್ದಾರೆ. ಕಡಿಮೆ ಸಂಬಳವಿದ್ದರೂ ದಿನದ 24 ಗಂಟೆಯೂ ಅರಣ್ಯ ಯೋಧರಂತೆ ಕೆಲಸ ಮಾಡುತ್ತಿರುವವರನ್ನು ಕೈ ಬಿಡಲು ಚಿಂತನೆ ನಡೆಸಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿಗೆ ಜನರು ತತ್ತರಿಸಿದ್ದಾರೆ. ಬಿಕ್ಕೋಡು-ಅರೇಹಳ್ಳಿ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಇತ್ತೀಚೆಗೆ ಕಾಡಾನೆಗಳ ಉಪಟಳದಿಂದ ಜನರು ತತ್ತರಿಸಿ ಹೋಗಿದ್ದಾರೆ. ಸಾಕಷ್ಟು ಜೀವಗಳು ಕಾಡಾನೆಗಳ ದಾಳಿಗೆ ಸಿಲುಕಿ ಬಲಿಯಾಗಿವೆ. ಮತ್ತಷ್ಟು ಜನರು ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಬಿಕ್ಕೋಡು ಸಮೀಪದ ಜಗಬೋರನಹಳ್ಳಿ ಅರಣ್ಯ ಪ್ರದೇಶದಲ್ಲಿ ಬೀಡು ಬಿಡುತ್ತಿದ್ದ ಕಾಡಾನೆಗಳು ಸಂಜೆಯಾಗುತ್ತಿದ್ದಂತೆಯೇ ಅಕ್ಕಪಕ್ಕದ ಗ್ರಾಮಗಳ ಜಮೀನುಗಳತ್ತ ನುಗ್ಗಿ ಬೆಳೆ ನಾಶಪಡಿಸಿವೆ. 20ಕ್ಕೂ ಹೆಚ್ಚು ಕಾಡಾನೆಗಳು ಕಳೆದ ಕೆಲ ತಿಂಗಳಿಂದ ಬಿಕ್ಕೋಡು ಸಮೀಪದ ಚಿಕ್ಕಬಿಕ್ಕೋಡು, ಮತ್ತಾವರ, ನಿಡುಮನಹಳ್ಳಿ, ಜಗಬೋರನಹಳ್ಳಿ, ಕೋಗಿಲಮನೆ, ಬೊಮ್ಮಡಿಹಳ್ಳಿ, ಕುಶಾವರ, ಮೊಗಸಾವರ, ಚೌಡನಹಳ್ಳಿ ಹಾಗೂ ಕಸಬಾ ಹೋಬಳಿಯ ಕೊತ್ತನಹಳ್ಳಿ, ಹಿರಿಕೊಲೆ, ಚಿಕ್ಕೋಲೆ, ತಗರೆ ಗ್ರಾಮಗಳ ಜಮೀನುಗಳಿಗೆ ದಾಳಿ ಇಟ್ಟು ನೂರಾರು ಎಕರೆಯಲ್ಲಿ ಹುಲುಸಾಗಿ ಬೆಳೆದಿದ್ದ ಜೋಳ, ಭತ್ತ, ರಾಗಿ ಬೆಳೆ ತಿಂದು ನಾಶಪಡಿಸಿವೆ.



ಸಾಕಷ್ಟು ಆನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗಟ್ಟುವಲ್ಲಿ ಯಶಸ್ವಿಯಾಗಿದ್ದರೂ ಇನ್ನೂ ಬಿಕ್ಕೋಡು ಮತ್ತು ಅರೇಹಳ್ಳಿ ಹೋಬಳಿಯ ಅರಣ್ಯ ಸೇರಿ ವಿವಿಧ ಗ್ರಾಮಗಳಲ್ಲಿ ಕಾಡಾನೆಗಳಿವೆ. ಗುಂಪಿನಿಂದ ಬೇರಾದ ಒಂದೆರಡು ಕಾಡಾನೆಗಳು ತೋಟ, ಜಮೀನು, ಮನೆಗಳ ಪಕ್ಕದಲ್ಲೇ ಸಂಚರಿಸುತ್ತಿರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ.

ಕಾಡಾನೆಗಳ ಉಪಟಳದಿಂದ ರೈತರು, ಬೆಳೆಗಾರರು, ಕಾರ್ಮಿಕರನ್ನು ಮುಕ್ತರನ್ನಾಗಿಸಬೇಕೆಂದು ಸರ್ಕಾರ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳನ್ನು ಬಿಕ್ಕೋಡು-ಅರೇಹಳ್ಳಿ ಹೋಬಳಿ ರೈತರು, ಬೆಳೆಗಾರರು ಮತ್ತು ಕಾರ್ಮಿಕರು, ವಿವಿಧ ಗ್ರಾಮಗಳ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಇನ್ನಾದರೂ ಸಂಬಂಧಿಸಿದವರು ಎಚ್ಚೆತ್ತು ಬೆಳೆ ನಷ್ಟ ಹಾಗು ಮಾನವ-ಪ್ರಾಣಿ ಸಂಘರ್ಷಕ್ಕೆ ಇತಿಶ್ರೀ ಹಾಡುವರೇ ಎಂಬುದನ್ನು ಕಾದು ನೋಡಬೇಕಿದೆ.

> **"ಬೇಲೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕಾಡಾನೆಗಳ ಹಿಂಡು ಬೀಡು ಬಿಟ್ಟಿವೆ. ಐಬಿಸಿ ಎಸ್ಟೇಟ್ ಮೂಲಕ ಬೇಡಿ ತೋಟಕ್ಕೆ ಬಂದಿದ್ದ 20ಕ್ಕೂ ಹೆಚ್ಚು ಆನೆಗಳು ನಂತರ ಕೋಗೋಡು ಗ್ರಾಮದ ಕಾಫಿ ತೋಟಕ್ಕೆ ತೆರಳಿ ಅಲ್ಲಿಂದ ಅರಮನೆ ಗುಡ್ಡಕ್ಕೆ ಪ್ರವೇಶಿಸಿದ್ದವು. ಪುನಃ ವಾಪಾಸ್ ಬಂದು ಐಬಿಸಿ ತೋಟದಲ್ಲಿ ಬೀಡು ಬಿಟ್ಟಿವೆ. ಆನೆಗಳ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದು ಸ್ಥಳೀಯರಿಗೆ ಮಾಹಿತಿ ನೀಡಲಾಗುತ್ತಿದೆ.**
>
> **-ಯತೀಶ್, ವಲಯ ಅರಣ್ಯಾಧಿಕಾರಿ ಬೇಲೂರು**

**ನಿತ್ಯ ದಾಂಧಲೆಯಿಂದ ರೈತರು ಹೈರಾಣ**

ಬೇಲೂರು ತಾಲ್ಲೂಕಿನಲ್ಲಿ 3 ವರ್ಷಗಳ ಹಿಂದೆ ಬೆರಳೆಣಿಕೆಯಷ್ಟಿದ್ದ ಕಾಡಾನೆಗಳು ಇತ್ತೀಚೆಗೆ ಲೆಕ್ಕ ಹಾಕಲು ಸಿಗದಷ್ಟು ಹೆಚ್ಚಾಗಿವೆ. ಎಲ್ಲಿ ನೋಡಿದರೂ ತೋಟ ಮತ್ತು ಅರಣ್ಯ ಇರುವುದರಿಂದ ಆನೆಗಳು ಸಹ ತಮ್ಮ ವಂಶಾಭಿವೃದ್ಧಿ ಹೆಚ್ಚಿಸಿಕೊಳ್ಳುತ್ತಿರುವ ಕಾರಣ ದಿನದಿಂದ ದಿನಕ್ಕೆ ಆನೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ನಿತ್ಯ ಕಾಡಾನೆಗಳ ದಾಂಧಲೆಗೆ ರೈತರು ಕಣ್ಣೀರು ಹಾಕುವಂತಾಗಿದ್ದು, ಸರ್ಕಾರ ಹಾಗು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಭೀಮ ಹೆಸರಿನ ಒಂಟಿ ಕಾಡಾನೆ ಹಗಲು-ರಾತ್ರಿ ಎನ್ನದೆ ಆಹಾರ ಅರಸಿ ವಿವಿಧ ಗ್ರಾಮಗಳ ಆಸು ಪಾಸು, ಜನ ವಸತಿ ಪ್ರದೇಶಗಳ ಮುಂಭಾಗದಲ್ಲೇ ಹೆಚ್ಚಾಗಿ ಕಾಣಿಸಿಕೊಂಡು ಓಡಾಡುತ್ತಿದ್ದರೂ ಜನರಿಗೆ ತೊಂದರೆ ಕೊಡದ ಕಾರಣ ಅದರ ಬಗ್ಗೆ ಯಾರೂ ಅಷ್ಟಾಗಿ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಆದರೆ, ಕಳೆದ ತಿಂಗಳು ಮದವೇರಿದ್ದ ಭೀಮ ಆನೆ ಕ್ಯಾಪ್ಟನ್ ಆನೆಯೊಂದಿಗಿನ ಕಾದಾಟದಲ್ಲಿ ತನ್ನ ಎಡ ಭಾಗದ ದಂತ ಕಳೆದುಕೊಂಡು ಬೇಲೂರು-ಸಕಲೇಶಪುರ ಗಡಿ ಭಾಗದಲ್ಲಿ ಕಾಣಿಸಿ ಕೊಳ್ಳುತ್ತಿದ್ದಾನೆ. ಈಗ ಆತನ ಆರೋಗ್ಯ ಪರಿಸ್ಥಿತಿ ಹೇಗಿದೆ. ಮೊದಲಿನಂತೆ ಶಾಂತ ನಾಗಿದ್ದಾನೋ ಅಥವಾ ಆಕ್ರೋಶದಿಂದ ಇದ್ದಾನೋ ಗೊತ್ತಿಲ್ಲ. ಜನರಿಗೆ ತೊಂದರೆ ಕೊಡದೆ ತನ್ನ ಪಾಡಿಗೆ ತಾನಿರುತ್ತಿದ್ದ ಭೀಮನ ವರ್ತನೆಯಲ್ಲಿ ಬದಲಾವಣೆಗಳಾಗಿದ್ದರೆ ತಕ್ಷಣ ಸೆರೆ ಹಿಡಿಯಬೇಕೆಂದು ರೈತರು ಆಗ್ರಹಿಸಿದ್ದಾರೆ.

# ಸುತ್ತೂರು ಜಾತ್ರೆ : ಡಿ.9ರಿಂದ ಜಿಲ್ಲೆಯಲ್ಲಿ ಜಾಗೃತಿ ರಥ

• ಪ್ರಜೋದಯ ವರದಿ

**ಹಾಸನ:** ಸುತ್ತೂರು ಶ್ರೀ ಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ಡಿ. 9ರಿಂದ ಜಿಲ್ಲೆಯಲ್ಲಿ ಜಾಗೃತಿ ರಥ ಸಂಚರಿಸಲಿದೆ ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ತಿಳಿಸಿದ್ದಾರೆ.



ಅಂದು ಸಂಜೆ 4 ಗಂಟೆಗೆ ರಥವು ಸಕಲೇಶಪುರದ ಶ್ರೀ ಗುರುವೇಗೌಡ ಕಲ್ಯಾಣ ಮಂಟಪಕ್ಕೆ ತಲುಪಲಿದೆ. ಡಿ.10ರಂದು ಬೆಳಿಗ್ಗೆ 9.30ಕ್ಕೆ ಬಾಳ್ಳುಪೇಟೆ, 10 ಗಂಟೆಗೆ ಆಲೂರಿನ ಶ್ರೀ ವೀರಶೈವ ಕಲ್ಯಾಣ ಮಂಟಪ, 11 ಗಂಟೆಗೆ ತಣ್ಣೀರುಹಳ್ಳ ಮಠ, ಬೆ.11.30ಕ್ಕೆ ಹಾಸನದ ಬಸವೇಶ್ವರ ದೇವಸ್ಥಾನ, ಮಧ್ಯಾಹ್ನ 12 ಗಂಟೆಗೆ ಜವೇನಹಳ್ಳಿ ಮಠಕ್ಕೆ ಭೇಟಿ ನೀಡಿ ನಂತರ ಅರಸೀಕೆರೆಗೆ ತೆರಳಲಿದೆ. ಜಾತ್ರಾ ರಥೋತ್ಸವದ ಪೂಜೆ ಮತ್ತು ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸುವಂತೆ ಅವರು ಕೋರಿದ್ದಾರೆ.

# ಹಿರೀಸಾವೆ ಆರೋಗ್ಯ ಕೇಂದ್ರದ ನವೀಕರಣಕ್ಕೆ ಅನುದಾನ

## ಡಯಾಲಿಸಿಸ್ ಯೂನಿಟ್ ಮೂಲ ಸೌಕರ್ಯ: ಶಾಸಕ ಸಿ.ಎನ್.ಬಾಲಕೃಷ್ಣ ಭರವಸೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಡಯಾಲಿಸಿಸ್ ಯೂನಿಟ್ ಹಾಗೂ ಮೂಲ ಸೌಕರ್ಯಗಳನ್ನು ಅಗತ್ಯವಾಗಿ ಒದಗಿಸಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಡಯಾಲಿಸಿಸ್ ಯೂನಿಟ್ ಅಳವಡಿಕೆಗೆ ಶುಕ್ರವಾರ ಸ್ಥಳ ವೀಕ್ಷಿಸಿ ಮಾತನಾಡಿ, ಡಯಾಲಿಸಿಸ್ ಸೌಲಭ್ಯದಿಂದ ತಾಲ್ಲೂಕು ವ್ಯಾಪ್ತಿಯ ಮಧುಮೇಹ ರೋಗಿಗಳಿಗೆ ಅನುಕೂಲವಾಗಲಿದೆ ಎಂದರು.

ಆಧುನಿಕರಣ ವ್ಯವಸ್ಥೆ ಹಾಗೂ ಜೀವನ ಶೈಲಿಯೊಂದಿಗೆ ಆಹಾರ ಪದ್ಧತಿಯು ಬದಲಾವಣೆಯಿಂದ ಮನುಷ್ಯನ ಆರೋಗ್ಯ ಹದಗೆಡುತ್ತಿದೆ. ಪರಿಶ್ರಮವಿಲ್ಲದ ಜೀವನ ಅನಾರೋಗ್ಯಕ್ಕೆ ಎಡೆ ಮಾಡಿಕೊಟ್ಟಿದ್ದು ಮಧುಮೇಹ, ರಕ್ತದೊತ್ತಡ ಹಾಗೂ ವಿವಿಧ ಕಾಯಿಲೆಗಳು ಮನುಷ್ಯನ ನೆಮ್ಮದಿ ಕಸಿದುಕೊಂಡಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮುದಾಯ ಆರೋಗ್ಯ ಕೇಂದ್ರವನ್ನು ವಿವಿಧ ಅನುದಾನಗಳನ್ನು ಬಳಸಿಕೊಂಡು ಹಂತ ಹಂತವಾಗಿ ಶೌಚಾಲಯ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಅಭಿವೃದ್ಧಿಗೊಳಿಸಲಾಗಿದೆ. ಸಮುದಾಯ ಕೇಂದ್ರದ ನವೀಕರಣಕ್ಕೆ 1.50 ಕೋಟಿ ರೂ. ಅನುದಾನ ಅಗತ್ಯವಿದ್ದು ರಾಜ್ಯ ಸರ್ಕಾರ ಹಾಗೂ ಆರೋಗ್ಯ ಸಚಿವರ ಗಮನ ಸೆಳೆದು ಶೀಘ್ರ ಅನುದಾನ ಕಲ್ಪಿಸುವಂತೆ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆಯೇ ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರವಿದ್ದು ಪ್ರತಿದಿನ 350 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಹೊರರೋಗಿಗಳು ಆಗಮಿಸುತ್ತಾರೆ. ಯಾವುದೇ ಸಮಸ್ಯೆ ಹಾಗೂ ಗೊಂದಲವಾಗದಂತೆ ಸೌಜನ್ಯದಿಂದ ವರ್ತಿಸಿ ಜನತೆಗೆ ಅಗತ್ಯ ಚಿಕಿತ್ಸೆ ನೀಡಬೇಕು ಎಂದು ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆಯ ಸಿಇಒ ಅವರಿಗೆ ಸ್ಥಳದಿಂದಲೇ ಕರೆ ಮಾಡಿ, ಡಯಾಲಿಸಿಸ್ ಯೂನಿಟ್ ಹಾಗೂ ಇತರ ಪರಿಕರಗಳನ್ನು ಜರೂರಾಗಿ ಅಳವಡಿಸಿ ಶೀಘ್ರದಲ್ಲಿಯೇ ಚಿಕಿತ್ಸೆ ಪ್ರಾರಂಭಿಸಲು ಸಿದ್ಧತೆ ಮಾಡಿಕೊಡಬೇಕು ಎಂದು ಮನವಿ ಮಾಡಿದರಲ್ಲದೆ, ಶ್ರವಣಬೆಳಗೊಳ ಆಸ್ಪತ್ರೆಯಲ್ಲಿ ಚಿಕಿತ್ಸಾ ಕೊಠಡಿ ಇಲ್ಲ, ತಾಲ್ಲೂಕಿನ ಕೆಲ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದ್ದು ಹೆಚ್ಚಿನ ಅನುದಾನ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದರು.

ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಹೆಚ್.ಜಿ.ರಾಮಕೃಷ್ಣ ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶ್, ಮಾಜಿ ಅಧ್ಯಕ್ಷ ಎಚ್.ಕೆ.ಬೋರಣ್ಣ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಎಚ್.ಎಸ್.ರವಿಕುಮಾರ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಜೆ. ಮಹೇಶ್, ನಿರ್ದೇಶಕ ಹಿಂದ್ಪಟ್ಟಿ ಬೋರೇಗೌಡ, ವೆಂಕಟೇಶ್, ಫೈನಾನ್ ಮಹೇಶ್, ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಶಿವಸ್ವಾಮಿ, ವೈದ್ಯ ವೃಂದ ಹಾಗೂ ಸಿಬ್ಬಂದಿ ಹಾಜರಿದ್ದರು.

# ಎಲ್‌ಎಲ್‌ಆರ್‌ಗೆ ಅರ್ಜಿ: ಏಳು ದಿನದೊಳಗೆ ಕಲಿಕಾ ಪರೀಕ್ಷೆ

• ಪ್ರಜೋದಯ ವರದಿ

**ಬೆಂಗಳೂರು:** ವಾಹನ ಚಾಲನಾ ಕಲಿಕಾ ಪರವಾನಗಿ (ಎಲ್‌ಎಲ್‌ಆರ್) ಪಡೆಯಲು ಅರ್ಜಿ ಸಲ್ಲಿಸಿದವರು ಏಳು ದಿನಗಳ ಒಳಗೆ ಆನ್‌ಲೈನ್ ಮೂಲಕ ಕಲಿಕಾ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುವ ನಿಯಮ ಜನವರಿ 1ರಿಂದ ಜಾರಿಗೆ ಬರಲಿದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಎಲ್‌ಎಲ್‌ಆರ್‌ಗೆ ಅರ್ಜಿ ಹಾಕಿದವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದಾರೆಯೇ ಎಂಬುದನ್ನು ಈ ಪರೀಕ್ಷೆ ಮೂಲಕ ಪತ್ತೆ ಹಚ್ಚಲಾಗುತ್ತದೆ. ಯಾವ ಸಮಸ್ಯೆ ಇಲ್ಲದವರಿಗೆ ವಾಹನ ಚಾಲನಾ ಕಲಿಕೆಗೆ ಪರವಾನಗಿ ಸಿಗಲಿದೆ. ಎನ್‌ಐಸಿ ಅಭಿವೃದ್ಧಿ ಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ ತಂತ್ರಾಂಶದ ಮೂಲಕ ಆಧಾರ್/ಮೊಬೈಲ್ ಒಟಿಪಿ ಬಳಸಿಕೊಂಡು ಅರ್ಜಿ ಸಲ್ಲಿಸಬೇಕು.

ನಿಗದಿತ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಶುಲ್ಕ ಪಾವತಿಸಬೇಕು. ಪರವಾನಗಿ ಪ್ರಾಧಿಕಾರದವರಿಂದ ಅರ್ಜಿ ಪರಿಶೀಲನೆ ನಡೆಸಿದ ಬಳಿಕ ಏಳು ದಿನಗಳ ಒಳಗೆ ಆನ್‌ಲೈನ್ ಮೂಲಕ ಪರೀಕ್ಷೆ ತೆಗೆದುಕೊಳ್ಳಬೇಕು. ಏಳು ದಿನಗಳ ಒಳಗೆ ಪರೀಕ್ಷೆ ತೆಗೆದುಕೊಳ್ಳದಿದ್ದರೆ ತಂತ್ರಾಂಶದಲ್ಲಿ ಅರ್ಜಿಯು ಸ್ವಯಂ ರದ್ದಾಗುತ್ತದೆಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ.ಯೋಗೀಶ್ ತಿಳಿಸಿದ್ದಾರೆ. ಈಗಾಗಲೇ ಅರ್ಜಿ ಸಲ್ಲಿಸಿದವರಿಗೆ ಡಿ.31ರೊಳಗೆ ಕಲಿಕಾ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಿ ಏಳು ದಿನಗಳ ಒಳಗೆ ಪರೀಕ್ಷೆ ತೆಗೆದುಕೊಳ್ಳುವ ನಿಯಮ 2026ರ ಜ.1ರಿಂದ ಜಾರಿಗೆ ಬರಲಿದೆಯೆಂದು ಮಾಹಿತಿ ನೀಡಿದ್ದಾರೆ.

# ರೋ-ಕೊ ಸ್ಥಾನವನ್ನೂ ಯಾರೂ ಪ್ರಶ್ನಿಸಬಾರದು: ಸಂಜಯ್ ಬಂಗಾರ್

• ಪ್ರಜೋದಯ ವರದಿ



**ವಿಶಾಖಪಟ್ಟಣ:** ಏಕದಿನ ಕ್ರಿಕೆಟ್ ತಂಡದಲ್ಲಿ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಸ್ಥಾನವನ್ನು ಪ್ರಶ್ನೆ ಮಾಡುವುದರ ಬಗ್ಗೆ ಟೀಂ ಇಂಡಿಯಾದ ಮಾಜಿ ಕೋಚ್ ಸಂಜಯ್ ಬಂಗಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊಹ್ಲಿ ಮತ್ತು ರೋಹಿತ್, ಶನಿವಾರವಷ್ಟೇ (ಡಿ.6) ಮುಕ್ತಾಯವಾದ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಅಮೋಘ ಆಟವಾಡಿದ್ದರು. ಅದರ ಬೆನ್ನಲ್ಲೇ, ಏಕದಿನ ತಂಡದಲ್ಲಿ ರೋ-ಕೊ ಸ್ಥಾನವನ್ನು ಯಾರೂ ಪ್ರಶ್ನಿಸಬಾರದೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದಕ್ಷಿಣ ಆಫ್ರಿಕಾ ಆತಿಥ್ಯದಲ್ಲಿ 2027ರ ಏಕದಿನ ವಿಶ್ವಕಪ್ ನಡೆಯಲಿದೆ. ಹಾಗಾಗಿ, ಪ್ರಸ್ತುತ ಸರಣಿಯು ರೋ-ಕೊ ಪಾಲಿಗೆ ಮಹತ್ವದ್ದಾಗಿತ್ತು. ಅದರಲ್ಲಿ ಅವರಿಬ್ಬರೂ ಪಾಸ್ ಆಗಿದ್ದಾರೆ.

ಒಂದು ಸಲ ರೋ-ಕೊ ಆಟಕ್ಕೆ ಕುದುರಿಕೊಂಡರೆ, ರನ್ ಗಳಿಸುವ ಹಸಿವು ಶುರುವಾದರೆ, ವ್ಯತ್ಯಾಸ ನಿಮಗೇ ಕಾಣುತ್ತದೆ. ಅವರಿಬ್ಬರ ಉಪಸ್ಥಿತಿಯು ಡ್ರೆಸ್ಸಿಂಗ್ ರೂಂನ ವಾತಾವರಣವನ್ನೇ ಬದಲಿಸುತ್ತದೆ ಎಂದು ಬಂಗಾರ್ ಹೇಳಿದ್ದಾರೆ.

# ದುಬೈ ಒಕ್ಕಲಿಗರ ಯುಎಇ 'ಸ್ನೇಹಸಮ್ಮಿಲನ'

• ಪ್ರಜೋದಯ ವರದಿ



**ಹಾಸನ:** ಒಕ್ಕಲಿಗರ ಸಂಘ ದುಬೈ ವತಿಯಿಂದ ಅನಿವಾಸಿ ಗೌಡ ಕುಲ ಬಾಂಧವರು ಸೇರಿಕೊಂಡು ನಡೆಸಿದ ಸ್ನೇಹ ಸಮ್ಮಿಲನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಯುಎಇ ಒಕ್ಕಲಿಗರ ಅಧಿಕೃತ ವೇದಿಕೆಯಾಗಿರುವ ಒಕ್ಕಲಿಗರ ಸಂಘ ದುಬೈನ ಈ ಸ್ನೇಹ ಸಮ್ಮಿಲನ ಕಾರ್ಯಕ್ರಮ ಗುರುದೇವ ನಿರ್ಮಲಾನಂದ ಸ್ವಾಮೀಜಿಯವರ ಆಶೀರ್ವಾದೊಂದಿಗೆ ಪ್ರಾರಂಭವಾಯಿತು, ಸಮುದಾಯ ಬಾಂಧವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡಾ ಕಾರ್ಯಕ್ರಮಗಳು, ಮಕ್ಕಳ ಮನೋರಂಜನಾ ಕಾರ್ಯಕ್ರಮಗಳು ತುಂಬಾ ಆಕರ್ಷಕವಾಗಿ ನಡೆದವು, ಸಮುದಾಯದ ಹಲವು ಪ್ರತಿಭಾನ್ವಿತ ಮಕ್ಕಳ ಕೌಶಲ್ಯಗಳ ಅನಾವರಣಕ್ಕೆ ಇದು ಸುಂದರ ವೇದಿಕೆಯಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಒಕ್ಕಲಿಗರ ಸಂಘ ದುಬೈ ಅಧ್ಯಕ್ಷ ಕಿರಣ್‌ಗೌಡ, 'ಮರುಭೂಮಿ ನಾಡು ಯುಎಇಯಲ್ಲಿರುವ ಎಲ್ಲಾ ಅನಿವಾಸಿ ಗೌಡ ಕುಲ ಬಾಂಧವರು ಒಂದೇ ಕುಟುಂಬದ ರೀತಿ ಒಗ್ಗಟ್ಟಿನಿಂದ ಪರಸ್ಪರ ಪ್ರೀತಿ ಗೌರವದಿಂದ, ಗೌಡ ಸಂಸ್ಕೃತಿಯನ್ನು ಹೆಮ್ಮೆಯಿಂದ ಪ್ರತಿನಿಧಿಸುತ್ತಾ ಗೌಡರ ಗತ್ತನ್ನು ಎತ್ತಿಹಿಡಿಯುವ' ಎಂದರು,

ಒಕ್ಕಲಿಗರ ಸಂಘ ದುಬೈ ವತಿಯಿಂದ ಮುಂದಿನ ದಿನಗಳಲ್ಲಿ ನಡೆಯಲಿರುವ ಹಲವು ಕಾರ್ಯಕ್ರಮಗಳ ಬಗ್ಗೆ ಬೆಳಕು ಚೆಲ್ಲಿದರು, ಕುಟುಂಬ ಸಮೇತರಾಗಿ ಬಂದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಸಂಘದ ಪೋಷಕರಾದ ಹರೀಶ್ ಕೋಡಿ, ಉಪಾಧ್ಯಕ್ಷರಾದ ಪುಟ್ಟರಾಜು ಗೌಡ ಹಾಗೂ ಇತರ ಕೋರ್ ಕಮಿಟಿ ಸದಸ್ಯರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸಿದರು.

# ಪ್ರತಿಭಾ ಕಾರಂಜಿ ಒಂದು ದಿನಕ್ಕೆ ಸೀಮಿತವಾಗಬಾರದು: ಸುರೇಶ್

• ಪ್ರಜೋದಯ ವರದಿ



**ಬೇಲೂರು:** ಪ್ರತಿಯೊಬ್ಬರಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಅದನ್ನು ಹೊರಗಡೆ ತೆಗೆಯಲು ಪ್ರಯತ್ನ ನಿರಂತರವಾಗಿ ನಡೆಯಬೇಕು. ಈ ಹಿನ್ನೆಲೆಯಲ್ಲಿ ಪ್ರತಿಭಾ ಕಾರಂಜಿ ಒಂದು ದಿನಕ್ಕೆ ಸೀಮಿತವಾಗಬಾರದು ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಪಟ್ಟಣದ ಜೆ.ಪಿ. ನಗರದಲ್ಲಿರುವ ಮೌಂಟ್ ಕಾರ್ಮೆಲ್ ಸ್ಕೂಲ್ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಸರ್ಕಾರ ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪ್ರತಿಭಾ ಕಾರಂಜಿ, ಮಕ್ಕಳ ಮೇಳ, ಕ್ರಿಡಾ ಕಾರ್ಯಕ್ರಮಗಳನ್ನು ಪೂರಕವಾಗಲಿದೆ. ಇಲ್ಲಿ ಮಕ್ಕಳು ತಮ್ಮಲ್ಲಿರುವ ಕಲೆ, ಸಾಹಿತ್ಯ, ಜಾನಪದ ಪ್ರಾಕಾರದ ಪ್ರತಿಭೆಯನ್ನು ತೋರಿ ಸಾಂಸ್ಕೃತಿಕವಾಗಿ ಮುಂದೆ ಬರಬೇಕು ಪ್ರತಿಯೊಂದು ಮಗುವಿನಲ್ಲೂ ಒಂದಲ್ಲ ಒಂದು ಸಾಂಸ್ಕೃತಿಕ ಪ್ರತಿಭೆ ಅಡಗಿರುತ್ತದೆ. ಅದನ್ನು ಗುರುತಿಸಿ ಅನಾವರಣ ಮಾಡುವ ಮೂಲಕ ಮಕ್ಕಳು ಸರ್ವಾಂಗೀಣ ಬೆಳವಣಿಗೆ ಸಾಧಿಸಲು ಅವಕಾಶ ಕಲ್ಪಿಸಬೇಕು. ಸೋಲು, ಗೆಲುವಿನ ಬಗ್ಗೆ ಯೋಚಿಸದೆ ಸ್ಪರ್ಧೆಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದ ಅವರು ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಅರಳಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದ್ದು, ಮಕ್ಕಳು ಕೂಡ ಉತ್ಸಾಹದಿಂದ ಪಾಲ್ಗೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲ ದೇಸಿ ಹಾಗೂ ಪಾರಂಪರಿಕ ಕಲೆ, ಸಂಗೀತ- ನೃತ್ಯ ಹಾಗೂ ಇತರ ಸಾಂಸ್ಕೃತಿಕ ಕಲೆಗಳು ಅವನತಿಗೊಳ್ಳಬಹುದಾದ ಸಂಧಿಕಾಲದಲ್ಲಿ ಪ್ರತಿಭಾವಂತ ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಶಿಕ್ಷಣ ಇಲಾಖೆಯು ಇಂತಹ ವೇದಿಕೆಗಳನ್ನು ರೂಪಿಸಿದೆ. ಇದನ್ನು ಪೋಷಿಸದಿದ್ದರೆ ದೇಶದ ಎಲ್ಲಾ ರೀತಿಯ ಕಲೆಗಳು ನಾಶಗೊಳ್ಳಬಹುದಾದ ಆತಂಕವಿದೆ ಈ ಕಾರಣದಿಂದ ಶಿಕ್ಷಕರು ಮತ್ತು ಪೋಷಕರು ತಮ್ಮ ಮಕ್ಕಳಿಗೆ ಅಂಕಕ್ಕೆ ಮಾತ್ರ ಪ್ರಾಮುಖ್ಯತೆ ನೀಡದರೆ ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಕರೆ ನೀಡಿದರು.

ಪ್ರತಿಭಾ ಕಾರಂಜಿ ಕಾರ್ಯಕ್ರಮವು ವಿನೂತನವಾಗಿದ್ದು, ಸಾಂಸ್ಕೃತಿಕ ಹಾಗೂ ಸಾಹಿತ್ಯಕವಾಗಿ ಶಾಲೆ, ಕ್ಲಸ್ಟರ್ ಬ್ಲಾಕ್, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಸಭೆಗಳನ್ನು ರೂಪಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಾಮಾನ್ಯ ವೇದಿಕೆಯಾಗಿದ್ದು, ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಮುಂದಿನ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಶಿಕ್ಷಣದಲ್ಲಿ ಅಂಕಗಳ ಜತೆಗೆ ಜೀವನ ಮೌಲ್ಯಗಳು, ಉತ್ತಮ ಸಂಸ್ಕೃತಿ, ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜುನಾಥ, ತಾಲ್ಲೂಕು ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಉದಯಕುಮಾರ್, ಜೋಸೆಫ್ ಪಿಂಟೋ, ಬಿ.ಎನ್. ಆನಂದ್, ಶಿವಪ್ಪ, ನವೀನಕುಮಾರ್, ಹೇಮಂತ್ ಇನ್ನಿತರರು ಇದ್ದರು.

# ರಸ್ತೆ ಅಭಿವೃದ್ಧಿಗೆ ಅಡ್ಡಿ: ಕಾರೇಹಳ್ಳಿ ಗ್ರಾಮಸ್ಥರ ಪ್ರತಿಭಟನೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಚನ್ನರಾಯಪಟ್ಟಣ ಹಾಗೂ ತಿಪಟೂರು ಮುಖ್ಯ ರಸ್ತೆಯಲ್ಲಿ ಬರುವ ತಾಲ್ಲೂಕಿನ ಬಾಗೂರು ಹೋಬಳಿಯ ಕಾರೇಹಳ್ಳಿಯಿಂದ ಅಣತಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯ ಅಭಿವೃದ್ಧಿಗೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕಾರೇಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸರ್ಕಾರಿ ರಸ್ತೆ ಅಭಿವೃದ್ಧಿಗೆ ಅಡ್ಡಿ. ಕಳೆದ 3 ವರ್ಷಗಳ ಹಿಂದೆ ಚನ್ನರಾಯಪಟ್ಟಣ- ತಿಪಟೂರು ಮುಖ್ಯ ರಸ್ತೆಯಿಂದ ಕಾರೇಹಳ್ಳಿ ಗ್ರಾಮದ ವರೆಗೆ ಸುಮಾರು 850 ಮೀಟರ್ ಉದ್ದ ರಸ್ತೆ ನಿರ್ಮಾಣಕ್ಕೆ ಸುಮಾರು 80 ಲಕ್ಷ ರೂ. ಅನುದಾನ ಬಿಡುಗಡೆಯಾಗಿತ್ತು ಆದರೆ ಈ ರಸ್ತೆಗೆ ಹೊಂದಿಕೊಂಡತ್ತಿರುವ ಸರ್ವೆ ನಂ. 49/1, 47/1, 47/4 ಜಮೀನಿನ ಮಾಲೀಕರಾದ ನಿಂಗೇಗೌಡ, ಸಿದ್ದೇಗೌಡ, ರಂಗಪ್ಪ, ಚೇತನ್‌ಕುಮಾರ್ ಎಂಬ ರೈತರು ರಸ್ತೆ ನಿರ್ಮಾಣಕ್ಕೆ ಅಡ್ಡಿಪಡಿಸಿ ರಸ್ತೆ ನಿರ್ಮಾಣವಾಗುತ್ತಿರುವ ಜಾಗಕ್ಕೆ ಪರಿಹಾರ ನೀಡುವಂತೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಬಗ್ಗೆ ಲೋಕಪಯೋಗಿ ಇಲಾಖೆ ವತಿಯಿಂದ ಕೋರ್ಟ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿ ರಸ್ತೆ ನಿರ್ಮಾಣಕ್ಕೆ ಈ ಹಿಂದೆ ಭೂ ಮಾಲೀಕರು ತಂದಿದ್ದ ತಡೆಯಾಜ್ಞೆಯನ್ನು ಕೋರ್ಟ್ ರದ್ದುಗೊಳಿಸಿ ರಸ್ತೆ ನಿರ್ಮಾಣಕ್ಕೆ ಅಡ್ಡಿಪಡಿಸದಂತೆ ಆದೇಶ ನೀಡಿತ್ತು. ಕಳೆದ 50 ವರ್ಷಗಳಿಂದಲೂ ಸರ್ಕಾರಿ ಖರಾಬು ರಸ್ತೆ ಇದ್ದು ನಾಲ್ಕೈದು ಬಾರಿ ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆ ಅಭಿವೃದ್ಧಿಗೊಳಿಸಲಾಗಿದೆ. ಆದರೂ ಉದ್ದೇಶಪೂರ್ವಕವಾಗಿ ಕೆಲವರು ತೊಂದರೆ ಕೊಡುತ್ತಿದ್ದಾರೆ ಎಂದು ಮಾಜಿ ಕೃಷಿ ಪತ್ತಿನ ಅಧ್ಯಕ್ಷ ನಟೇಶ್ ಅವರು ಆರೋಪಿಸಿದರು.

ದಿನನಿತ್ಯ ಸಾರ್ವಜನಿಕರು, ಶಾಲಾ ಮಕ್ಕಳು, ರೈತರು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು ರಸ್ತೆ ಗುಂಡಿ ಬಿದ್ದ ಹಿನ್ನೆಲೆಯಲ್ಲಿ ಅನೇಕ ಅಪಘಾತಗಳು ನಡೆದು ವಾಹನ ಸವಾರರಿಗೆ ಪೆಟ್ಟುಗಳಾಗಿವೆ. ಈಗಲಾದರೂ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಿ ರಸ್ತೆ ಕಾಮಗಾರಿ ಬೇಗ ಪೂರ್ಣಗೊಳಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಕೂಡ ರಸ್ತೆ ಅಭಿವೃದ್ಧಿಯಿಂದ ಈ ಭಾಗದ ಜನರಿಗೆ ಅನುಕೂಲವಾಗುತ್ತದೆ. ನೀವು ಯಾವುದೇ ಕಾರಣಕ್ಕೂ ಅಡ್ಡಿಪಡಿಸಬೇಡಿ ಎಂದು ಭೂ ಮಾಲೀಕರಿಗೆ ಅನೇಕ ಬಾರಿ ಮನವಿ ಮಾಡಿದ್ದರೂ ಕೂಡ ಸ್ಪಂದಿಸಿರಲಿಲ್ಲ, ಆದರೆ ಕೋರ್ಟ್ ಆದೇಶದಿಂದ ಈಗ ನ್ಯಾಯ ಸಿಕ್ಕಿದೆ. ಈ ಹಿಂದೆಯೂ ಈ ಭೂಮಾಲೀಕರು ಪಾಪನಘಟ್ಟ ಹಾಗೂ ಜಾಬ್‌ಘಟ್ಟ ಗ್ರಾಮದ ಹೊರಗಿನ ರಸ್ತೆ ಅಭಿವೃದ್ಧಿಗೂ ಅಡ್ಡಿಪಡಿಸಿದ್ದರು. ಜೊತೆಗೆ ಸಂತೇಶಿವರ ಏತನೀರಾವರಿ ಯೋಜನೆಯ ಪೈಪ್‌ಲೈನ್ ಅಳವಡಿಕೆಗೂ ತಡೆ ಮಾಡಿದರು ಎಂದು ಗ್ರಾಮಸ್ಥ ಬ್ಯಾಂಕ್ ಚಂದ್ರಣ್ಣ ತಿಳಿಸಿದರು.

ಅಣತಿ ವೆಂಕಟೇಶ್, ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕ ಕೆ.ಟಿ.ನಟೇಶ್, ಗ್ರಾ.ಪಂ.ಉಪಾಧ್ಯಕ್ಷ ಕೆ.ಸತೀಶ್, ಮಾಜಿ ಅಧ್ಯಕ್ಷ ಬಸವಣ್ಣ, ಕೆಬಿಎಂ ಮಂಜುನಾಥ್, ಉಮಾನ್, ನ್ಯಾಯಬೆಲೆ ಅಂಗಡಿ ಜಗದೀಶ್, ಸ್ಟೆಯಾದ್ರಿಗೌಡ, ರಾಮೇಗೌಡ, ಪುನೀತ್, ಗೋಪಾಲ್, ಕೆ.ವಿ.ರಾಜಣ್ಣ, ಪುಟ್ಟಸ್ವಾಮಿ, ರಿಯಾನ್, ಬಾಳೆಕಾಯಿ ಕಾಂತರಾಜ್ ಇತರರು ಹಾಜರಿದ್ದರು.

# ಭಗವದ್ಗೀತೆ ಒಂದು ಧರ್ಮಕ್ಕೆ ಸೀಮಿತವಲ್ಲ

• ಪ್ರಜೋದಯ ವರದಿ



**ಅರಕಲಗೂಡು:** ಭಗವದ್ಗೀತೆ ಯಾವುದೇ ಒಂದು ಜಾತಿ, ಸಮುದಾಯ, ಧರ್ಮಕ್ಕೆ ಸೀಮಿತವಲ್ಲ. ಎಲ್ಲ ಸಮುದಾಯದ ಮನುಕುಲಕ್ಕೆ ಹೇಳಿರುವ ಸಂದೇಶವಾಗಿದ್ದು, ಇದು ಜೀವನ ಮೌಲ್ಯಗಳ ದ್ಯೋತಕವಾಗಿದೆ ಎಂದು ಮುಖ್ಯ ಶಿಕ್ಷಕಿ ಬಿ.ಎಂ.ರಾಗಿಣಿ ತಿಳಿಸಿದ್ದಾರೆ.

ಪಟ್ಟಣದ ನಿವೇದಿತಾ ವಿದ್ಯಾಶಾಲೆಯಲ್ಲಿ ಆಯೋಜಿಸಿದ್ದ ಗೀತಾ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಗೀತೆಯಲ್ಲಿ ಹಲವು ಪಾತ್ರಗಳು ಇದ್ದು,ಧರ್ಮ ಮತ್ತು ಅಧರ್ಮಗಳ ನಡುವಿನ ಪರಿಚಯ ಮಾಡಿಕೊಡುತ್ತದೆಯಾದರೂ ಅಂತಿಮವಾಗಿ ಧರ್ಮಕ್ಕೆ ಗೆಲುವು ಎಂಬುದನ್ನು ಸಾರಿ ಹೇಳುತ್ತದೆ ಎಂದರು.

ಶಿಕ್ಷಕಿ ಕುಮಾರಿ ರಂಜಿತ ಅವರು ಮಾತನಾಡಿ, ಗೀತೆಯಲ್ಲಿ ಬರುವ ಕೃಷ್ಣಾರ್ಜುನರ ಸಂವಾದ ಪ್ರಸ್ತುತ ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬೇಕಾದ ಅಂಶಗಳಿದ್ದು, ಧರ್ಮದ ರಕ್ಷಣೆಯಿಂದ ಮನುಕುಲದ ಉದ್ಧಾರ ಸಾಧ್ಯ ಎಂಬುದನ್ನು ಹೇಳುತ್ತದೆ. ಗೀತೆಯಲ್ಲಿ ಬರುವ 18 ಅಧ್ಯಾಯಗಳನ್ನೂ ಕೇವಲ ಓದುವುದರಿಂದ ಯಾವುದೇ ಪ್ರಯೋಜನವಾಗದು. ಅದನ್ನು ಅಧ್ಯನ ಮಾಡಿ ಮಜ ಮಾಡಿಕೊಂಡು ಜೀವನದಲ್ಲಿ ಒಳ್ಳೆಯದನ್ನು ಅಳವಡಿಸಿಕೊಂಡಾಗ ಮಾತ್ರ ಗೀತಾ ಜಯಂತಿ ಕಾರ್ಯಕ್ರಮ ಮಾಡಿದ್ದಕ್ಕೆ ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ಭಗವದ್ಗೀತೆಯ ಆಯ್ದ ಶ್ಲೋಕಗಳನ್ನು ಸಾಮೂಹಿಕವಾಗಿ ಪಠಣ ಮಾಡಲಾಯಿತು. ನಂತರ ಭಗವದ್ಗೀತೆಯ ಪುಸ್ತಕಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಕ ಜ್ಞಾನೇಶ, ಬೇಬಿ, ಮೈತ್ರಿ, ಶ್ವೇತ, ಚಿತ್ರಲೇಖ, ಕೋಮಲ, ಶಿಲ್ಪ, ಆಯಿಷಾ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಸೇರಿದಂತೆ ಹಲವರು ಭಾಗಿಯಾಗಿದ್ದರು.

# ಕಾಂಗ್ರೆಸ್ ಸರ್ಕಾರದಲ್ಲೇ ಅನುದಾನದ ಕೊರತೆ

• ಪ್ರಜೋದಯ ವರದಿ



**ಹಾಸನ:** ಕಾಂಗ್ರೆಸ್ ಸರ್ಕಾರದ ಅನುದಾನದ ಕೊರತೆಯಿಂದ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. 37 ಹಳ್ಳಿಗಳು ನಗರಪಾಲಿಕೆಗೆ ಸೇರ್ಪಡೆಯಾಗಿದ್ದರೂ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಆರೋಪಿಸಿದರು.

ಹೇಮಾವತಿ ನಗರದಲ್ಲಿ ಇತ್ತೀಚೆಗೆ 1.48 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿ ಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರ ಅನುದಾನ ನೀಡದಿದ್ದರೂ ನಗರ ಪಾಲಿಕೆ ಅನುದಾನದಲ್ಲೇ ನಾವು ಚಿಕ್ಕಪುಟ್ಟ ಕಾಮಗಾರಿ ಮಾಡುತ್ತಿದ್ದೇವೆಂದು ಹೇಳಿದರು.

ಹೇಮಾವತಿ ನಗರದಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿದ್ದ ರಸ್ತೆ ಕಾಮಗಾರಿ, ಚರಂಡಿ ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಗಮನ ಸೆಳೆದ ಹಿನ್ನಲೆ, ಬಡಾವಣೆಯ ಸಮಸ್ಯೆಯನ್ನು ಪರಿಗಣಿಸಿ ಸುಮಾರು 1.48 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಹೇಮಾವತಿ ನಗರದ ಗಾಯತ್ರಿ ಭವನದ ರಸ್ತೆ ಹಾಗು ಪುಟ್ಟೇ ಗೌಡರ ಮನೆಯ ರಸ್ತೆ ಹಾಗು ಚರಂಡಿ ವ್ಯವಸ್ಥೆಗೆ ಅಗತ್ಯವಿರುವ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಬಡಾವಣೆಯ ಜನರು ಮಳೆ ನಂತರ ಉಂಟಾಗಿದ್ದ ರಸ್ತೆ, ಚರಂಡಿ, ಮೂಲಭೂತ ಸೌಕರ್ಯ, ಕುಡಿಯುವ ನೀರಿನ ತೊಂದರೆ ಬಗ್ಗೆ ಮನವಿ ಮಾಡಿದ್ದರು. ಆದ್ಯತೆ ಮೇರೆಗೆ ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಬಡಾವಣೆಯ ಪ್ರಮುಖ ಮಾರ್ಗಗಳ ದುರಸ್ತಿ, ಪೈಪ್‌ಲೈನ್ ನವೀಕರಣ, ನೀರು ಚರಂಡಿ ವ್ಯವಸ್ಥೆಗಳ ಸುಧಾರಣೆ, ಮಳೆ ನೀರು ಹರಿವಿನ ವ್ಯವಸ್ಥೆ ಹಾಗು ಕಾಲುವೆ ವಿಸ್ತರಣೆ ಸೇರಿ ಹಲವು ಕೆಲಸ ಈಗ ನಡೆಯಲಿವೆ ಎಂದು ಹೇಳಿದರು.

ನಿವಾಸಿಗಳ ಸಹಕಾರ ಇದ್ದರೆ ಮುಂದೆ ಏನೇ ಸಮಸ್ಯೆ ಇದ್ದರೂ ಸರಿಪಡಿಸಲಾಗುವುದು.ಎಲ್ಲಾ ಕಾಮಗಾರಿಗಳ ಗುಣಮಟ್ಟದ ಕೆಲಸ ಮಾಡಬೇಕೆಂದು ಸೂಚಿಸಲಾಗಿದೆ. ಜನರ ಬೇಡಿಕೆಗಳಿಗೆ ಸ್ಪಂದಿಸುವುದು ನಮ್ಮ ಕರ್ತವ್ಯ. ಹೇಮಾವತಿ ನಗರದಲ್ಲಿ ಇನ್ನೂ ಬಾಕಿ ಇರುವ ಸಮಸ್ಯೆ ಗಳನ್ನೂ ಹಂತ ಹಂತ ವಾಗಿ ಬಗೆಹರಿಸುತ್ತೇವೆ ಎಂದರು. ಈ ವೇಳೆ ಬಡಾವಣೆಯ ನಿವಾಸಿಗಳು, ಜೆಡಿಎಸ್ ಮುಖಂಡರು ಬಾಕಿ ಇರುವ ಸಮಸ್ಯೆ ಬಗ್ಗೆ ಶಾಸಕರಿಗೆ ಮನವರಿಕೆ ಮಾಡಿದರು. ಜೆಡಿಎಸ್ ಮುಖಂಡ ಬಿದರಿಕೆರೆ ಜಯರಾಮ್, ನಿವಾಸಿಗಳಾದ ಚೆನ್ನೇನಹಳ್ಳಿಸ್ವಾಮಿ ಇದ್ದರು.

# ಹೊಸತನ ಉತ್ತೇಜಿಸಲು ಮಾರ್ಗದರ್ಶನ ತರಬೇತಿ ಅವಶ್ಯ

• ಪ್ರಜೋದಯ ವರದಿ



**ಹಾಸನ:** ವಿದ್ಯಾರ್ಥಿಗಳಿಗೆ ನೈಜ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅಟೋಮೇಷನ್ ವರ್ಕ್‌ಶಾಪ್ ಹ್ಯಾಕ್‌ತಾನ್, 8 ಸಾಫ್ಟ್‌ವೇರ್ ಅಧಾರಿತ ತರಬೇತಿ ಹಾಗು ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಹೊಸತನವನ್ನು ಉತ್ತೇಜಿಸುವ ಮಾರ್ಗದರ್ಶನ ವಾಗಿದೆ ಎಂದು ಹಾಸನ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅರ್.ಟಿ. ದ್ಯಾವೇಗೌಡ ತಿಳಿಸಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜು ವತಿಯಿಂದ ಅರ್ಟಿಫೀಷಲ್ ಇನ್ ಟ್ಲೇಜೆನ್ಸಿ ಆಟೋಮೇಷನ್ 2025 ಎಂಬ ಒಂದು ದಿನದ ತರಭೇತಿ ಹಾಗೂ ಸ್ಪರ್ಧಾ ಶಿಬಿರವನ್ನು ವಿಭಾಗದ ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾನಾಡಿದ ಅವರು, ನವೀನ ಅಟೋಮೇಷನ್ ಕಲಿಕೆಯ ಅವಕಾಶ, ಉದ್ಯಮ ಮತ್ತು ವಿದ್ಯಾ ಸಂಸ್ಥೆಯ ಸಂಪರ್ಕಗಳು, ವಿದ್ಯಾರ್ಥಿಗಳಿಗೆ ತಂಡದಲ್ಲಿ ಕೆಲಸ ಮಾಡುವ ಕೌಶಲ್ಯಗಳನ್ನು ಬೆಳಸುವ ಸೂಕ್ತ ಮಾರ್ಗದರ್ಶನವಾಗಿದೆ. ಇಂತಹ ಅಧುನಿಕ ತಾಂತ್ರಿಕ ಕಾರ್ಯಗಳು ವಿದ್ಯಾರ್ಥಿಗಳಿಗೆ ವೃತ್ತಿ ಜೀವನಕ್ಕೆ ಅಗತ್ಯವಿರುವ ಹೊಸತನ ಮತ್ತು ಸಮಸ್ಯೆಗಳ ಪರಿಹಾರ ಮತ್ತು ಚಾತುರ್ಯತೆಯನ್ನು ಬೆಳೆಸುತ್ತದೆ ಎಂದರು.

ನಮ್ಮ ಕಾಲೇಜಿನ ಎ ಐ ಎಂ ಎಲ್ ವಿಭಾಗದಲ್ಲಿ 8 ಅಟೋಮೇಷನ್ ಅನ್ನು ಪಠ್ಯ ಕ್ರಮದಲ್ಲಿ ಪರಿಚಯಿಸಿದ ಖ್ಯಾತಿ ಕರ್ನಾಟಕದ ಮೊದಲ ವಿಭಾಗವಾಗಿದೆ, ಇದು ಪ್ರಶಂಸನೀಯವಾದ ಕೆಲಸವಾಗಿದೆ ಎಂದರಲ್ಲದೆ, ಇದರಿಂದ ನಮ್ಮ ಕಾಲೇಜು ಉತ್ತಮ ಬೆಳವಣಿಗೆಗೆ ಸಹಾಕಾರಿಯಾಗಲಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಲೆನಾಡು ಇಂಜಿನಿಯರಿಂಗ್ ಕಾಲೇಜು ವಿಭಾಗದ ಮುಖ್ಯಸ್ಥ ಡಾ.ಬಿ.ಸಿ.ಅರ್ಜುನ್ ಅವರು, ನಾವು ಕರ್ನಾಟಕದಲ್ಲಿ ಮೊದಲ ಬಾರಿಗೆ ಮತ್ತು ಭಾರತದಲ್ಲಿಯೂ ತುಂಭಾ ಕಡಿಮೆ ಸಂಸ್ಥೆ ಗಳು ಮಾತ್ರ 8 ಅನ್ನು ಅಧಿಕೃತ ಪಠ್ಯ ಕ್ರಮ ದಲ್ಲಿ ಸೇರಿಸುವ ನಿಟ್ಟಿನಲ್ಲಿ ಗೌರವ ಹೊಂದಿ ದ್ದೇವೆ, ಈ ಪಠ್ಯಕ್ರಮವು ವಿದ್ಯಾರ್ಥಿ ಗಳಿಗೆ ಕೌಶಲ್ಯಗಳನ್ನು ಕಾಲೇಜು ಮಟ್ಟದಲ್ಲಿ ಕಲಿಸುವ ಅಪರೂಪದ ಅವಕಾಶ ವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಖಜಾಂಚಿ ಹೆಚ್.ಡಿ. ಪಾರ್ಶನಾಥ್ ನೆರವೇರಿಸಿದರು.

ಮಲೆನಾಡು ಇಂಜಿನಿಯರಿಂಗ್ ಕಾಲೇಜು ಇನ್ಚಾರ್ಜ್ ಪ್ರಾಂಶುಪಾಲ ಡಾ.ಹೆಚ್. ಎಸ್.ನರಸಿಂಹನ್ ಮಾತನಾಡಿ, ಇಂತಹ ವೇದಿಕೆಗಳು ಉದ್ಯಮ ಸಂಬಂಧಿತ ಕೌಶಲ್ಯಗಳನ್ನು ಕಲಿಯಲು ಮಹತ್ವದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಲೆನಾಡು ಇಪೋ ಶಾಲೆಯ ಉಪಾಧ್ಯಕ್ಷರಾದ ಬಿ ಅರ್. ರಾಜಶೇಖರ್, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶಾಂತಿಗ್ರಾಮ ಶಂಕರ್, ಹೆಚ್.ಸುರೇಶ್ ಹಾಗೂ ಕಾರ್ಯಕ್ರಮದ ಸಂಯೋಜಕರಾದ ಹಾಗೂ ಅಸೋಸಿಯೇಟ್ ಪ್ರಾಧ್ಯಾಪಕರಾದ ಡಾ. ಹೆಚ್. ವೈ.ಸ್ವಾತಿ, ಸಹ ಪ್ರಾಧ್ಯಾಪಕರಾದ ಮಣಿಕಂಠ ಪ್ರಸಾದ್ ಮೊದಲಾದವರು ಹಾಜರಿದ್ದರು.

ತರಭೇತಿ ಹಾಗೂ ಸ್ಪರ್ಧೆ ಕಾರ್ಯಕ್ರಮದಲ್ಲಿ ಸುಮಾರು 160 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕರ್ನಾಟಕದ ಆನೇಕ ಪ್ರಮುಖ ಇಂಜಿನಿಯರಿಂಗ್ ಕಾಲೇಜುಗಳಿಂದ ಆಗಮಿಸಿದ್ದುದು ವಿಶೇಷವಾಗಿತ್ತು.

## ಆಲೂರು ತಾಲ್ಲೂಕು ತ್ರೈ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಸಿಮೆಂಟ್ ಮಂಜು

# ಏತ ನೀರಾವರಿ ಯೋಜನೆಗಳಿಗೆ ಮರುಜೀವ

• ಪ್ರಜೋದಯ ವರದಿ



**ಆಲೂರು:** ಏತ ನೀರಾವರಿ ಯೋಜನೆಗೆ ಮರು ಜೀವ ನೀಡುವ ನಿಟ್ಟಿನಲ್ಲಿ ಸರ್ಕಾರ ವಿಶೇಷ ಸಮಿತಿ ರಚನೆ ಮಾಡಿದ್ದು ಶೀಘ್ರದಲ್ಲಿ ಸ್ಥಗಿತಗೊಂಡಿರುವ ಯೋಜಗಳಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ನೀರಿಗೆ ಬರವಿಲ್ಲ, ತಾಂತ್ರಿಕ ಸಮಸ್ಯೆ ತೊಂದರೆ ಹಾಗೂ ನಿರ್ವಹಣೆ ಇಲ್ಲದೆ ಏತ ನೀರಾವರಿ ಯೋಜನೆ ಸ್ಥಗಿತಗೊಂಡಿದೆ. ಸರ್ಕಾರ ರಚಿಸಿರುವ ನೂತನ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದು ಪ್ರತಿ ಸಭೆಯಲ್ಲಿ ಕ್ಷೇತ್ರದ ನೀರಾವರಿ ಸಮಸ್ಯೆ ಕುರಿತು ನಿರಂತರವಾಗಿ ಬೆಳಕು ಚೆಲ್ಲುತ್ತಿದ್ದೆ. ತಾಲ್ಲೂಕಿನಲ್ಲಿರುವ ನೀರಾವರಿ ಯೋಜನೆಗಳು ಚಾಲನೆಗೊಳ್ಳಲು ಸಮಸ್ಯೆಗಳು ಏನು ಎಂದು ಅಧಿಕಾರಿಗಳಿಗೆ ಪ್ರಶ್ನಿಸಿದ ಶಾಸಕರಿಗೆ ಪ್ರತಿಕ್ರಿಯೆ ನೀಡಿದ ಅಧಿಕಾರಿಗಳು, ರಾಮೇನಹಳ್ಳಿ, ಹೊಸಪುರ ಏತ ನೀರಾವರಿ ಘಟಕದಲ್ಲಿ ಶೇ.90 ರಷ್ಟು ಕಾಮಗಾರಿ ಮುಗಿದಿದ್ದು. ವಿದ್ಯುತ್ ಸಂಪರ್ಕ ನೀಡಿದರೆ ಚಾಲನೆ ನೀಡಬಹುದು ಎಂದು ಉತ್ತರಿಸಿದರು.

15 ದಿನದ ಒಳಗಾಗಿ ಏತ ನೀರಾವರಿ ಯೋಜನೆ ಘಟಕ ಕಾರ್ಯ ನಿರ್ವಹಿಸಬೇಕು. ಅದಕ್ಕೆ ಬೇಕಾದ ಅಗತ್ಯ ಕ್ರಮ ವಹಿಸಬೇಕು. ವಾಟೆ ಹೊಳೆ ಮತ್ತು ಯಗಚಿ ಅಣೆಕಟ್ಟಿನಿಂದ ಹರಿಯುವ ವಿತರಣೆ ನಾಲೆಗಳು ಸರಿಯಾದ ನಿರ್ವಹಣೆ ಇಲ್ಲದೆ ಶೀತಲಗೊಂಡಿದ್ದು ನಾಲೆಗಳನ್ನು ಪುನಃಶ್ಚೇತನಗೊಳಿಸಿದರೆ ಸುಮಾರು 18 ಸಾವಿರ ಎಕರೆ ಪ್ರದೇಶಕ್ಕೆ ನೀರು ಹಾಯಿಸಬಹುದು. ಈ ಬಗ್ಗೆ ಇಂಜಿನಿಯರ್‌ಗಳು ನಾಲೆಗಳ ಪುನಃಶ್ಚೇತನಕ್ಕೆ ಬೇಕಾದ ಅನುದಾನಕ್ಕಾಗಿ ಅಂದಾಜು ಪಟ್ಟಿ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಸಾರ್ವಜನಿಕರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಿ:** ಸರ್ಕಾರಿ ಕಚೇರಿಗಳಿಗೆ ಭೇಟಿನೀಡುವ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಸಣ್ಣಪುಟ್ಟ ಕೆಲಸಗಳಿಗೂ ಜನರು ತಿಂಗಳುಗಟ್ಟಲೆ ತಹಶೀಲ್ದಾರ್ ಕಚೇರಿ ಅಲೆದಾಡಬೇಕಿದೆ. ಅಧಿಕಾರಿಗಳು ಜನಸಾಮಾನ್ಯರಿಗೆ ವಿನಾಃ ಕಾರಣ ಸತಾಯಿಸಿದರೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಸರ್ಕಾರಿ ಭೂಮಿ ಸಂರಕ್ಷಿಸುವತ್ತ ಅಧಿಕಾರಿಗಳು ಆಸಕ್ತಿ ವಹಿಸಬೇಕು. ಭೂ ಕಬಳಿಕೆ ನಿರಂತರವಾಗಿ ನಡೆದಿದ್ದು, ಭೂ ಕಬಳಿಕೆ ಆಗದಂತೆ ತಡೆಯುವುದು ಅತೀ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡುವುದು ಅಥವಾ ಭೂ ಕಬಳಿಕೆ ಆಗದಂತೆ ಗಮನಹರಿಸುವುದು ವಿವಿಧ ಇಲಾಖೆಗಳ ಜವಾಬ್ದಾರಿಯಾಗಿದೆ. ಈ ಹಿಂದೆ ತಾಲ್ಲೂಕಿನಲ್ಲಿ ವಿವಿಧ ಇಲಾಖೆಗಳಲ್ಲಿ ಸರ್ಕಾರಿ ಬಳಕೆಗೆಂದು ದಾನ ನೀಡಿರುವ ಜಾಗವನ್ನು ಸರ್ಕಾರದ ಖಾತೆ ಹೆಸರಿಗೆ ಖಾತೆ ಮಾಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೇಳಿದರಲ್ಲದೆ, ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗಗಳನ್ನು ಅಧಿಕಾರಿಗಳು ಗುರುತಿಸಿ ಮಾಹಿತಿ ನೀಡಬೇಕು. ಸರ್ಕಾರಿ ಜಾಗಗಳಿದ್ದರೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಹಾಯಕವಾಗುತ್ತದೆ ಎಂದರು.

ತೋಟಗಾರಿಕೆ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಸಹಾಯಕ ನಿರ್ದೇಶಕ ನೀಡಿದ ಅಸಮಂಜಸ ಮಾಹಿತಿಗಳ ಬಗ್ಗೆ ಶಾಸಕರು ಬೇಸರ ವ್ಯಕ್ತಪಡಿಸಿ, ಇಲಾಖೆಯ ವತಿಯಿಂದ ನೀಡುವ ಯೋಜನೆಗಳು ಜನರಿಗೆ ತಲುಪುತ್ತಿಲ್ಲ ವೆಂಬ ದೂರುಗಳಿವೆ. ಈ ಬಗ್ಗೆ ನೀವು ನೀಡಿರುವ ಫಲಾನುಭವಿಗಳ ತೋಟಗಳಿಗೆ ಖುದ್ದು ತೆರಳಿ ಪರಿಶೀಲನೆ ಮಾಡುವುದಾಗಿ ಎಚ್ಚರಿಸಿದರು. ಸರ್ಕಾರಿ ಶಾಲೆಗಳು ಉಳಿದರೆ ಮಾತ್ರ ಬಡಮಕ್ಕಳಿಗೆ ಶಿಕ್ಷಣ ಕೊಡಲು ಸಾಧ್ಯ. ಇಲ್ಲದಿದ್ದರೆ ಶಿಕ್ಷಣ ಎಂಬುದು ಬಡವರ ಮಕ್ಕಳಿಗೆ ಗಗನ ಕುಸುಮವಾಗಲಿದೆ ಆದ್ದರಿಂದ ಶಾಲೆಗಳ ಉಳುವಿಗೆ ಅಧಿಕಾರಿಗಳು ಶ್ರಮಿಸುವಂತೆ ತಿಳಿಸಿದರು.

ತಹಸೀಲ್ದಾರ್ ಮಲ್ಲಿಕಾರ್ಜುನ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಕ್ಷಿದಾರರಿಗೆ ಸೂಕ್ತ ನ್ಯಾಯ ಒದಗಿಸಿ

## ನ್ಯಾಯಾಲಯದ ಮೇಲೆ ನಂಬಿಕೆಗೆ ಬದ್ದರಾಗಿ: ನ್ಯಾಯಾಧೀಶೆ ಹೇಮಾವತಿ

• ಪ್ರಜೋದಯ ವರದಿ




**ಹೊಳೆನರಸೀಪುರ:** ವೃತ್ತಿಪರತೆಯಲ್ಲಿ ಹಣದ ವ್ಯಾಮೋಹಕ್ಕೆ ಒಳಗಾಗದೇ ಪ್ರಕರಣಗಳ ನೈಜತೆಯನ್ನು ಅರಿತು ಕಕ್ಷಿದಾರರಿಗೆ ಸೂಕ್ತ ನ್ಯಾಯ ಒದಗಿಸಿಕೊಡುವ ಮೂಲಕ ನ್ಯಾಯಾಲಯದ ಮೇಲೆ ನಂಬಿಕೆಗೆ ಬದ್ದರಾಗುವಂತೆ ವಕೀಲರಿಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಸಲಹೆ ನೀಡಿದರು.

ಪಟ್ಟಣದ ನ್ಯಾಯಾಲಯದ ಹೊರ ಆವರಣದಲ್ಲಿ ವಕೀಲರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯುವ ವಕೀಲರು ತಮ್ಮ ಹಿರಿಯ ವಕೀಲರನ್ನು ಅನುಸರಿಸಬೇಕು. ಇದರೊಂದಿಗೆ ಜ್ಞಾನ ಹೊಂದಬಹುದು. ಜತೆಗೆ ಮೊದಲು ಸರಸ್ವತಿ ಪುತ್ರರಾದಲ್ಲಿ ಲಕ್ಷ್ಮಿ ಕಟಾಕ್ಷ ತಾನಾಗಿಯೇ ಒಲಿಯುತ್ತದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ನೊಂದ ಕಟ್ಟ ಕಡೇ ವಕ್ತಿಗೂ ನ್ಯಾಯ ಪಡೆಯುವುದು ಸಂವಿಧಾನ ನೀಡಿರುವ ಹಕ್ಕು. ಅದರ ಪ್ರತಿಪಾದಕರಾಗಿ ವಕೀಲರು ಮತ್ತು ನ್ಯಾಯಾಧೀಶರಾದ ನಮ್ಮಗಳ ಕರ್ತವ್ಯ ಇರುತ್ತದೆ. ನ್ಯಾಯ ಸಂಪನ್ನತೆಯಲ್ಲಿ ತೊಡಗುವ ಸಂತೃಪ್ತಿ ಉತ್ತಮವಾದದ್ದು ಎಂದರು.

ತಾಲ್ಲೂಕು ಜೆಎಂಎಫ್‌ಸಿ ಸಿವಿಲ್ ಹಿರಿಯ ನ್ಯಾಯಾಧೀಶೆ ನಿವೇದಿತಾ ಮಹಂತೇಶ್ ಮನವಳ್ಳಿ ಮಠ್ ಮತನಾಡಿ, ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ಒದಗಿಸಿಕೊಡುವ ಧ್ಯೇಯೋದ್ದೇಶ ಒಂದೇ ವಕೀಲರ ಉದ್ದೇಶವಾಗಿರಬೇಕು ಎಂದರು. ಸಂವಿಧಾನದ ಪೀಠಿಕೆಯನ್ನು ಬೋಧಿಸಿ ಪ್ರಮಾಣ ವಚನ ಸ್ವೀಕರಿಸಲಾಯಿತು.

ಹಿರಿಯ ಪತ್ರಕರ್ತ ಎಚ್.ವಿ. ಸುರೇಶ್‌ಕುಮಾರ್, ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಎಚ್.ಬಿ.ವೆಂಕಟೇಶ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ವಕೀಲರ ದಿನಾಚರಣೆ ಹಿನ್ನಲೆಯಲ್ಲಿ ಹಲವು ಕ್ರೀಡಾ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾದ ವಕೀಲರಿಗೆ ಬಹುಮಾನ ವಿತರಿಸಲಾಯಿತು. ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶೆ ಚೇತನ, ವಕೀಲರ ಸಂಘದ ಅಧ್ಯಕ್ಷ ಶಿವಕುಮಾರ್, ಸರ್ಕಾರಿ ಅಭಿಯೋಜಿತ ವಕೀಲರಾದ ಸುನೀಲ್, ಶಿವಮ್ಮ, ಜಿ.ಎಸ್.ಸುರೇಶ್ ಹಾಗೂ ಹಿರಿಯ ವಕೀಲರುಗಳು ಉಪಸ್ಥಿತರಿದ್ದರು.

# ಗೋವಾ ನೈಟ್ ಕ್ಲಬ್ ಅಗ್ನಿ ಅವಘಡಕ್ಕೆ 25 ಜನರ ಸಾವು

• ಪ್ರಜೋದಯ ವರದಿ

**ಪಣಜಿ:** ಉತ್ತರ ಗೋವಾದ ಅರ್ಪೋರಾದಲ್ಲಿರುವ ರೋಮಿಯೋ ಲೇನ್‌ನ ಪ್ರಸಿದ್ಧ ನೈಟ್ ಕ್ಲಬ್ ಬಿರ್ಚ್‌ನಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿ 25 ಮಂದಿ ಸಜೀವ ದಹನಗೊಂಡಿರುವ ಘಟನೆ ಶನಿವಾರ ರಾತ್ರಿ ನಡೆದಿದೆ.

ಘಟನೆಯಲ್ಲಿ 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮೃತರಲ್ಲಿ ಮೂರರಿಂದ ನಾಲ್ಕು ಮಂದಿ ಪ್ರವಾಸಿಗರು ಮತ್ತು ಕ್ಲಬ್‌ನ 19 ಸಿಬ್ಬಂದಿ ಸೇರಿದ್ದಾರೆ. ಅಡುಗೆ ಮನೆಯಲ್ಲಿ ಸಿಲಿಂಡರ್ ಸ್ಫೋಟವಾಗಿರಬಹುದು ಎನ್ನಲಾಗಿದೆ. ಸ್ಫೋಟದ ತೀವ್ರತೆಗೆ ಬೆಂಕಿಯ ಜ್ವಾಲೆಗಳು ಕೆಲವೇ ಸೆಕೆಂಡುಗಳಲ್ಲಿ ಇಡೀ ಕಟ್ಟಡವನ್ನು ಆವರಿಸಿಕೊಂಡಿತ್ತು.

ನೈಟ್ ಕ್ಲಬ್ ಅನ್ನು ಸೀಲ್ ಮಾಡಿದ್ದು ಮಾಲೀಕರು ಮತ್ತು ಆಡಳಿತ ಮಂಡಳಿಯನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ. ಮೂಲಗಳ ಪ್ರಕಾರ, ಕ್ಲಬ್ ಮಾಲೀಕರು ಅಗ್ನಿ ಸುರಕ್ಷತಾ ಮಾನದಂಡಗಳನ್ನು ಪಾಲಿಸಿರಲಿಲ್ಲ ಎನ್ನಲಾಗುತ್ತಿದೆ. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಘಟನೆ ಕುರಿತು ಪ್ರತಿಕ್ರಿಯಿಸಿದ್ದು, ಮೃತರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ. ಘಟನೆಗೆ ನಿಖರ ಕಾರಣ ಮತ್ತು ಅಗ್ನಿ ಸುರಕ್ಷತಾ ನಿಯಮಗಳು ಮತ್ತು ಕಟ್ಟಡ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ತನಿಖೆಯು ಪರಿಶೀಲಿಸುತ್ತದೆ. ತಪ್ಪಿತಸ್ಥರು ಕಾನೂನಿನಡಿಯಲ್ಲಿ ಅತ್ಯಂತ ಕಠಿಣ ಕ್ರಮ ಎದುರಿಸಬೇಕಾಗುತ್ತದೆ. ಯಾವುದೇ ನಿರ್ಲಕ್ಷ್ಯ ಸಹಿಸುವುದಿಲ್ಲವೆಂದು ಹೇಳಿದ್ದಾರೆ.

ಘಟನೆಗೆ ಗಣ್ಯರ ಸಂತಾಪ

ಮೃತರ ಕುಟುಂಬಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.



ಉತ್ತರ ಗೋವಾ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ಬೆಂಕಿ ಅವಘಡದಲ್ಲಿ ಪ್ರಾಣಹಾನಿ ಆಗಿರುವುದು ತೀವ್ರ ನೋವುಂಟು ಮಾಡಿದೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇನೆ. ಹಾಗೆಯೇ ಗಾಯಗೊಂಡವರು ಶ್ರೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗೋವಾದ ಅರ್ಪೋರಾದಲ್ಲಿ ಸಂಭವಿಸಿದ ಅಗ್ನಿ ಅವಘಡ ತೀವ್ರ ದುಃಖಕರ. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡವರಿಗೆ ಸಂತಾಪ ಸೂಚಿಸು ತ್ತೇನೆ. ಗಾಯಾಳುಗಳು ಆದಷ್ಟು ಬೇಗ ಗುಣ ಮುಖರಾಗಲಿ. ಘಟನೆ ಸಂಬಂಧ ಗೋವಾ ಮುಖ್ಯ ಮಂತ್ರಿ ಪ್ರಮೋದ್ ಸಾವಂತ್ ಅವರೊಂದಿಗೆ ಮಾತನಾಡಿದ್ದೇನೆ. ರಾಜ್ಯ ಸರ್ಕಾರವು ಸಂತ್ರಸ್ತರಿಗೆ ಸಾಧ್ಯವಿರುವ ಎಲ್ಲಾ ನೆರವು ಒದಗಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗೋವಾದ ಅರ್ಪೋರಾದಲ್ಲಿ 20ಕ್ಕೂ ಹೆಚ್ಚು ಜೀವಗಳನ್ನು ಬಲಿ ಪಡೆದ ಭೀಕರ ಬೆಂಕಿ ದುರಂತದಿಂದ ತೀವ್ರ ನೋವುಂಟಾಗಿದೆ. ಮೃತರ ಕುಟುಂಬಗಳಿಗೆ ನನ್ನ ಸಂತಾಪಗಳು ಮತ್ತು ಗಾಯಾ ಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುತ್ತೇನೆಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದು ಕೇವಲ ದುರಂತವಲ್ಲ, ಸುರಕ್ಷತೆ ಮತ್ತು ಆಡಳಿತದ ವೈಫಲ್ಯ. ಘಟನೆ ಸಂಬಂಧ ಸರ್ಕಾರ ಪಾರದರ್ಶಕವಾಗಿ ತನಿಖೆ ನಡೆಸಬೇಕು. ಇಂತಹ ದುರಂತಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ರಾಹುಲ್ ಆಗ್ರಹಿಸಿದ್ದಾರೆ.

## ಸರ್ಕಾರಿ ಶಾಲೆ ಉಳಿದರಷ್ಟೇ ಕನ್ನಡಕ್ಕೆ ಆಯಸ್ಸು

• ಪ್ರಜೋದಯ ವರದಿ

**ಬೇಲೂರು:** ಸರ್ಕಾರಿ ಶಾಲೆಗಳನ್ನು ಉಳಿಸಿದರಷ್ಟೇ ಎರಡು ಸಾವಿರ ವರ್ಷಗಳ ಇತಿಹಾಸವಿ ರುವ ಕನ್ನಡವನ್ನು ರಕ್ಷಿಸಲು ಸಾಧ್ಯವಾಗುತ್ತದೆಂದು ದೇಶ ಭಕ್ತರ ಬಳಗದ ಅಧ್ಯಕ್ಷ ಡಾ. ಸಂತೋಷ್ ಅವರು ಹೇಳಿದರು.

ಕನ್ನಡ ರಾಜ್ಯೋತ್ಸವ ಅಂಗವಾಗಿ ದೇಶ ಭಕ್ತರ ಬಳಗದಿಂದ ಪಟ್ಟಣದ ವಿದ್ಯಾ ವಿಕಾಸ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಬಾರಿಸು ಕನ್ನಡ ಡಿಂಡಿಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಮಾತ್ರವೇ ಕನ್ನಡ ಉಳಿಸಿ ಎಂದು ಹೇಳಿದರೆ ಸಾಲದು. ಕನ್ನಡ ಉಳಿಸಬೇಕೆಂದರೆ ಸರ್ಕಾರಿ ಶಾಲೆಗಳ ಉಳಿವು ಅಗತ್ಯ. ಆದ್ದರಿಂದ ಸರ್ಕಾರ ಮಕ್ಕಳ ಸಂಖ್ಯೆಯ ಹೆಸರಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚದೆ ಸೌಲಭ್ಯ ಕಲ್ಪಿಸಿ ಮಕ್ಕಳು ಮತ್ತು ಪೋಷಕರನ್ನು ಆಕರ್ಷಿಸಿ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿದರು.

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ಭಾರತದ ಅತ್ಯಂತ ಶ್ರೇಷ್ಠ ಶಾಸ್ತ್ರೀಯ ಭಾಷೆಯಾಗಿದೆ. ಆದರೆ ಬೆಂಗಳೂರು ಸೇರಿ ಕೆಲ ಕಡೆಗಳಲ್ಲಿ ಅನ್ಯಭಾಷೆಯ ಪ್ರಾಬಲ್ಯದಿಂದ ಕನ್ನಡಿಗರಿಗೆ ಅವಮಾನವಾಗುತ್ತಿದೆ. ಬೆಳಗಾವಿಯಿಂದ ಕಾಸರಗೋಡು ವರೆಗೆ ಕನ್ನಡಿಗರ ಹಕ್ಕುಗಳಿಗೆ ಧಕ್ಕೆಯಾದಾಗ ನಾಡು ನುಡಿ ವಿಚಾರವಾಗಿ ಹೋರಾಟಕ್ಕೆ ಮುಂದಾಗುವ ಕನ್ನಡಪರ ಸಂಘಟನೆಗಳಿಗೆ ಬೆಂಬಲ ನೀಡಿ ಗೌರವಿಸುವುದು ಎಲ್ಲರ ಕರ್ತವ್ಯವಾಗಬೇಕೆಂದರು.

ಕರವೇ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್ ಅವರು ಮಾತನಾಡಿ, ಕನ್ನಡಿಗನ ಅಸ್ತಿತ್ವಕ್ಕೆ ಧಕ್ಕೆಯಾದಾಗ ಕರವೇ ಹೋರಾಟಕ್ಕೆ ಇಳಿಯುವುದು ಅನಿವಾರ್ಯ. ಕನ್ನಡ ಪರ ಹೋರಾಟದಲ್ಲಿ ನಮ್ಮ ಸಂಘಟನೆ ಯಾವಾಗಲೂ ಮುಂದೆ ಇರುತ್ತದೆ. ಮಕ್ಕಳು ಸಹ ಕನ್ನಡಾಭಿಮಾನ ಬೆಳೆಸಿ ಕೊಂಡು ಕನ್ನಡವನ್ನು ಉಳಿಸುವ ನಿಟ್ಟಿನಲ್ಲಿ ಮುಂದಾಗಬೇಕೆಂದರು.

ವಿದ್ಯಾ ವಿಕಾಸ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ.ಎಂ.ಎಂ.ರಮೇಶ್, ಅಬ್ದುಲ್ ಖಾದರ್, ಸಾಹಿತಿ ಪ್ರಕಾಶ್ ಸೋಮರ, ನಿರಂಜನ್, ಪ್ರಾಧ್ಯಾಪಕರಾದ ಸುಜಯ್, ಹರೀಶ್, ಈರೇಶ್, ದೇಶಭಕ್ತರ ಬಳಗದ ಮಹದೇವ ಕುಲಕರ್ಣಿ, ಶೋಭಾ ಹಾಗು ಇತರರಿದ್ದರು.



## ಪ್ರತ್ಯೇಕ ಅಪಘಾತ: ಇಬ್ಬರು ಮಹಿಳೆಯರ ಸಾವು

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ನಗರ ಹಾಗು ಹಾಸನ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮಹಿಳೆ ಯರು ಮೃತಪಟ್ಟಿದ್ದಾರೆ.

ಬೈಕ್ ಸವಾರನ ನಿರ್ಲಕ್ಷ್ಯದ ಚಾಲನೆಯಿಂದ ಹಿಂಬದಿ ಕುಳಿತಿದ್ದ ಆತನ ತಾಯಿ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ.

ಸತ್ಯಮಂಗಲ ನಿವಾಸಿ ಜಯಮ್ಮ (68) ಮೃತರು. ಕಿರಿಯ ಪುತ್ರ ಸುರೇಶ್ ಜೊತೆಗೆ ಬಸವೇಶ್ವರ ನಗರದ ಸಂಬಂಧಿಕರ ಮನೆಗೆ ಊಟಕ್ಕೆಂದು ತೆರಳಿದ್ದರು. ರಾತ್ರಿ 9.30ರ ಸಮಯದಲ್ಲಿ ಬರುತ್ತಿದ್ದಾಗ ವೇಗ ಹಾಗು ನಿರ್ಲಕ್ಷ್ಯದ ಚಾಲನೆಯಿಂದ ನಿಯಂತ್ರಣ ತಪ್ಪಿ ಜಯಮ್ಮ ಅವರು ಕೆಳಗೆ ಬಿದ್ದಿದ್ದಾರೆ. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಲಾರಿ ಡಿಕ್ಕಿಯಾಗಿ ಬೈಕ್ ಹಿಂಬದಿ ಕುಳಿತಿದ್ದ ಮಹಿಳೆ ಮೃತಪಟ್ಟ ಘಟನೆ ಹೊಳೆನರಸೀಪುರ ಸಮೀಪದ ಸೂರನಹಳ್ಳಿ ಬಳಿ ನಡೆದಿದೆ.

ಕಸಬಾ ಹೋಬಳಿ ತಿರುಮಲಾಪುರ ಗ್ರಾಮದ ಜಯಂತಿ (50) ಮೃತರು. ಪತಿ ಕೇಶವ ಮೂರ್ತಿ ಜೊತೆಗೆ ಬೈಕ್‌ನಲ್ಲಿ ಬಂದಿದ್ದ ಅವರು ಹೊಳೆನರಸೀಪುರದಿಂದ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಲಾರಿ ಡಿಕ್ಕಿಯಾಗಿದೆ. ಲಾರಿಯ ಚಕ್ರ ತಲೆ ಮೇಲೆ ಹರಿದ ಪರಿಣಾಮ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಾರಸ್ವತ್‌ಗೆ ಚೊಚ್ಚಲ ಸೂಪರ್ 100 ಪ್ರಶಸ್ತಿ

**ಗುವಾಹಟಿ:** ಭಾರತದ ಆಟಗಾರರ ವ್ಯವಹಾರವಾಗಿದ್ದ ಫೈನಲ್‌ನಲ್ಲಿ ರಾಜಸ್ಥಾನದ ಸಂಸ್ಕಾರ್ ಸಾರಸ್ವತ್ ಅವರು ಮೂರು ಗೇಮ್‌ಗಳ ಸೆಣಸಾಟದ ನಂತರ ಮಿಥುನ್ ಮಂಜುನಾಥ್ ಅವರನ್ನು ಸೋಲಿಸಿ ಗುವಾಹಟಿ ಮಾಸ್ಟರ್ಸ್ ಪ್ರಶಸ್ತಿ ಗೆದ್ದುಕೊಂಡರು. ಇದು ಸಾರಸ್ವತ್ ಅವರಿಗೆ ಮೊದಲ ಸೂಪರ್ 100 ಪ್ರಶಸ್ತಿಯಾಗಿದೆ.

ಭಾನುವಾರ 50 ನಿಮಿಷಗಳವರೆಗೆ ನಡೆದ ಫೈನಲ್‌ನಲ್ಲಿ ಜೋಧಪುರದ ಸಾರಸ್ವತ್ 21-11, 17-21, 21-13 ರಿಂದ ಮಾಜಿ ರಾಷ್ಟ್ರೀಯ ಚಾಂಪಿ ಯನ್, ಕರ್ನಾಟಕದಮಿಥುನ್‌ಅವರನ್ನು ಸೋಲಿಸಿದರು. ಗುವಾಹಟಿಯ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಸಾರಸ್ವತ್, ದೇಶಿ ಟೂರ್ನಿಯಲ್ಲಿ ಈಗಾಗಲೇ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಅರ್ಷ್ ಮೊಹಮ್ಮದ್ ಜೊತೆಗೂಡಿ ಪ್ರಶಸ್ತಿ ಗೆದ್ದುಕೊಂಡಿದ್ದರು. ಮೊದಲು ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಕಿರೀಟ ಧರಿಸಿದ್ದರು.

## ದೇಶದ ತಳಿಗಳನ್ನು ಉಳಿಸುವ ಮಾರ್ಗದರ್ಶನ ನೀಡಲು ಸಲಹೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರಿಯ ರೈತರು ನಮ್ಮ ದೇಶದ ತಳಿಗಳನ್ನು ಉಳಿಸುವ ಮಾರ್ಗದರ್ಶನ ವನ್ನು ಇಂದಿನ ಯುವಕರಿಗೆ ನೀಡಬೇಕು. ರಾಸುಗಳನ್ನು ಸಾಕವುದನ್ನು ತಮ್ಮ ಮಕ್ಕಳಿಗೆ ಕಲಿಸುವ ಮೂಲಕ ನಮ್ಮ ಸಂಸ್ಕೃತಿಯನ್ನು ಕಾಪಾಡಬೇಕೆಂದು ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸೋರೆಕಾಯಿಪುರ ಗ್ರಾಮದಲ್ಲಿ ಹೋರಿ ಹಬ್ಬದ ಪ್ರಯುಕ್ತ ಗ್ರಾಮದೇವತೆ ಶ್ರೀ ಮಲ್ಲಿಗಮ್ಮ ದೇವಸ್ಥಾನದ ಬಳಿ ರೈತರಿಗೆ ಮಲೆನಾಡು ಗಿಡ್ಡ ತಳಿಯ ಹೋರಿಗಳ ಉಚಿತ ವಿತರಣಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಮಾನವ ಆರೋಗ್ಯವಾಗಿ ಇರಬೇಕಾದರೆ, ಉತ್ತಮವಾದ ಆಹಾರಬೇಕು. ದೇಶಿಯ ತಳಿಯ ಹಾಲಿನಲ್ಲಿ ರೋಗ ಗಳನ್ನು ತಡೆಗಟ್ಟವು ಮತ್ತು ರುಚಿಕರ, ಪೌಷ್ಟಿಕಯುಕ್ತ ಹಾಲು, ದೇಶಿ ತಳಿ ಯಿಂದ ಹಾಲು ಉತ್ಪಾದನೆ ಕಡಿಮೆ ಇದ್ದರೂ, ಆರೋಗ್ಯಕರವಾದ ಗುಣ ಮಟ್ಟದ ಹಾಲು ದೊರೆಯುತ್ತದೆ. ಇದನ್ನು ನಮ್ಮ ಪೂರ್ವಿಕರು ಅರಿತಿ ದ್ದರು ಆದರೆ ನಾವು ಅದನ್ನು ಮರೆಯುತ್ತಿದ್ದೇವೆ ಎಂದರು.



ರೈತರ ಮನೆಯಲ್ಲಿ ಹೆಚ್ಚು ಗೋವುಗಳು ಇದ್ದರೆ, ಆ ಮನೆಯಲ್ಲಿ ಸುಖ, ಶಾಂತಿ, ಸಂವೃದ್ಧಿ ಮತ್ತು ಪವಿತ್ರವಾಗಿರುತ್ತದೆ. ಸಮಾಜದಲ್ಲಿ ಒಬ್ಬರ ಮೇಲೆ ಒಬ್ಬರಿಗೆ ನಂಬಿಕೆ ಇಲ್ಲದೆ, ಇಂದು ದೇವಸ್ಥಾನ ಮತ್ತು ಶಾಲೆಗಳು ಸೇರಿ ಎಲ್ಲಾ ಕಡೆ ಸಿಸಿ ಕ್ಯಾಮೆರಾ ಅಳವಡಿಸಿ, ಎಲ್ಲರನ್ನು ಅಪ ನಂಬಿಕೆಯಿಂದ ನೋಡುತ್ತಿವೆ. ಎಲ್ಲಾರು ಶ್ರೀಮಂತರ ಆಗಬೇಕೆಂಬ ದಾವಂತದಲ್ಲಿ ಇದ್ದೇವೆ, ಇದು ನಮ್ಮ ಸಂಸ್ಕೃತಿ ಅಲ್ಲ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಕಸಾಯಿಖಾನೆ ನೀಡುವ ಸಂಸ್ಕೃತಿಯನ್ನು ರೈತರು ನಿಲ್ಲಿಸಬೇಕು. ಸರ್ಕಾರ ಪ್ರತಿ ತಾಲ್ಲೂಕಿನಲ್ಲಿ ಒಂದ ಗೋವು ಸೇವಾ ಕೇಂದ್ರವನ್ನು ತೆರೆದು, ಪಶು ಆಹಾರ ಮತ್ತು ವೈದ್ಯರು ಸೇರಿ ಮೂಲಭೂತ ಸೌಲಭ್ಯಗಳನ್ನು ಒದಗಿಸದಾಗ, ದೇಶಿಯ ತಳಿಗಳನ್ನು ಉಳಿಸಲು ಸಾಧ್ಯ ಎಂದರು.

ಮಲೆನಾಡು ಗಿಡ್ಡ ತಳಿ ಮತ್ತು ಹಾಸನ ಗೂಳಿ ಸಂರಕ್ಷಕ ಶರತ್‌ಗೌಡ ನೇತೃತ್ವದಲ್ಲಿ 20 ಜೊತೆ ಮಲೆನಾಡು ಗಿಡ್ಡ ಹೋರಿಗಳನ್ನು ಸಂಸ್ಥೆಯಲ್ಲಿ ನೊಂದಾಯಿಸಿಕೊಂಡಿದ್ದ ರೈತರಿಗೆ ಸಂಸ್ಥೆಯ ನಿಯಮದಂತೆ ಉಚಿತವಾಗಿ ನೀಡಲಾಯಿತು.

ರಾಷ್ಟ್ರೀಯ ಗೋ ಸೇವಾಸಂಸ್ಥಾನದ ಅಧ್ಯಕ್ಷ ಭಕ್ತಿ ಭೂಷಣ್ ದಾಸ್, ದೇಶಿಯ ತಳಿಯ ಸಂರಕ್ಷಣಾ ಮತ್ತು ಸಂವರ್ಧನಾ ಅಭಿಯಾನದ ಮುಖಂಡರಾದ ಬಸವರಾಜು ಬಿರಾದರ್, ವಿವೇಕ್ ಬ್ರಹ್ಮೂರು, ಅಕ್ಷಯ್ ಆಳ್ವ, ಬೇಕರಿ ತೇಜಮೂರ್ತಿ, ಆಯರಹಳ್ಳಿ ಪ್ರಭಾಕರ್, ಕರವೇ ಶಿವರಾಜು ಮತ್ತಿತರರು ವೇದಿಕೆಯಲ್ಲಿದ್ದರು.

## ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತಿಮುಖ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಣ-ಅಸ್ತಿ ಸಂಪಾದನೆಗಿಂತ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅತಿಮುಖ್ಯ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದಲ್ಲಿ ನವೀಕರಣಗೊಂಡಿರುವ ನಾಗೇಶ್ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಆರೋಗ್ಯವೇ ಸರಿಯಿಲ್ಲದ ಮೇಲೆ ಕೂಡಿಟ್ಟ ಅಷ್ಟೂ ಹಣವು ವ್ಯರ್ಥ. ಕಾರ್ಖಾನೆಗಳು, ಸಂಘ -ಸಂಸ್ಥೆಗಳು ಹಾಗೂ ಕೃಷಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಆಧುನಿಕ ಯಂತ್ರೋಪಕರಣ ಗಳು ಪಾದರ್ಪಣೆ ಮಾಡಿದ್ದು, ಮನುಷ್ಯ ಶ್ರಮದ ಕೆಲಸಗಳಿಂದ ದೂರ ಉಳಿಯುತ್ತಿದ್ದಾನೆ. ಪರಿಣಾಮ ಇನ್ನಿಲ್ಲದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾನೆಂದು ಆತಂಕ ವ್ಯಕ್ತಪಡಿಸಿದರು.

ಜೊತೆಗೆ ಆಹಾರ ಪದ್ಧತಿಯಲ್ಲಿ ಸಾಕಷ್ಟುಬದಲಾವಣೆಯಾಗಿದೆ. ಮನೆ ಊಟಕ್ಕಿಂತ ಯುವ ಸಮುದಾಯವು ರಸ್ತೆ ಬದಿಯಲ್ಲಿ ಸಿಗುವ ಆಹಾರ ಪದಾರ್ಥಗಳನ್ನು ಉಪಯೋಗಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಧುಮೇಹ, ರಕ್ತದೊತ್ತಡ ಸೇರಿ ವಿವಿಧ ಕಾಯಿಲೆಗಳು ತಲೆದೂರುತ್ತಿದ್ದು ಬದುಕು ನಿಂತ ನೀರಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಯೋಗ ಹಾಗೂ ಧ್ಯಾನವನ್ನು ದೈನಂದಿನಚಟುವಟಿಕೆಯಾಗಿ ರೂಢಿಸಿಕೊಳ್ಳಬೇಕು. ಅಡುಗೆ ಯಲ್ಲಿ ತಾಜಾ ತರಕಾರಿ ಬಳಕೆ ಹಾಗೂ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸೇವನೆ ಮಾಡುವುದು ಸೂಕ್ತ. ಅದರಿಂದ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ಕೃಷಿ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಳ್ಳುವ ರೈತ ವರ್ಗವು ತಮ್ಮ ಆರೋಗ್ಯದ ಬಗ್ಗೆ ಅಗತ್ಯ ಕಾಳಜಿ ವಹಿಸುವುದಿಲ್ಲ. ವರ್ಷದಲ್ಲಿ 2-3 ಬಾರಿ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಒಳ್ಳೆಯದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜೇಗೌಡ, ಸಂಸ್ಥೆಯ ಆಡಳಿತ ವೈದ್ಯಾಧಿಕಾರಿ ಡಾ.ಕೆ. ನಾಗೇಶ್, ಕಾರ್ಯದರ್ಶಿ ಡಾ.ಭಾರತಿ ಹಾಗೂ ಇತರರು ಇದ್ದರು.

## 69ನೇ ಅಂಬೇಡ್ಕರ್ ಪರಿನಿಬ್ಬಾಣ ದಿನ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಶನಿವಾರ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಶಾಸಕ ಎ.ಮಂಜು ಅವರು ಭಾಗವಹಿಸಿ ಅಂಬೇ ಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಅಂಬೇಡ್ಕರ್ ಅವರು ಈ ದೇಶದ ಮಹಾನ್ ಚೇತನ. ಈ ಹಿಂದಿನ ಕ್ಲಿಷ್ಟಕರ ಸಮಾಜವನ್ನು ಎದುರಿಸಿ ದೇಶಕ್ಕೆ ದೊಡ್ಡ ಕೊಡುಗೆ ನೀಡುವ ನಿಟ್ಟಿನಲ್ಲಿ ಹತ್ತಾರು ಪದವಿಗಳನ್ನು ಪಡೆದ ಫಲವಾಗಿಯೇ ಅವರ ಅಪಾರ ಜ್ಞಾನ ಮತ್ತು ಅನುಭವಿಸಿದ ಶೋಷಣೆಗಳಿಗೆ ಮುಕ್ತಿಕೊಡುವ ನಿಟ್ಟಿನಲ್ಲಿ ದೇಶದ ಅಭಿವೃದ್ಧಿ, ಪ್ರಜಾಪ್ರಭುತ್ವಕ್ಕೆ ಸಂವಿಧಾನ ಕೊಟ್ಟಿದ್ದಾರೆ. ಅದರ ಆಶಯಗಳನ್ನು ಪ್ರತಿಯೊಬ್ಬರು ಅನುಸರಣೆ ಮಾಡಿ ನಡೆದುಕೊಂಡರೆ ಅವರಿಗೆ ಸಲ್ಲಿಸುವ ದೊಡ್ಡ ಗೌರವ ಆಗುತ್ತದೆ. ಈ ನಿಟ್ಟಿನಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಸಂಘ-ಸಂಸ್ಥೆಗಳು ಹಾಗೂ ಯುವ ಸಮಾಜದವರು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಮುಂದಾಗೋಣವೆಂದರು.

ಅಧಿಕಾರಿಗಳಾದ ನಾಗೇಂದ್ರ, ಕುಮಾರ್, ಸಿ.ಸ್ವಾಮಿ, ಉಮೇಶ್, ಸೋಮಶೇಖರ್, ಸಂಘಟನೆ ಮುಖಂಡರು, ಸಾರ್ವಜನಿಕ ಹಾಜರಿದ್ದರು.

## ಅಂಬೇಡ್ಕರ್ ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಬಾಬಾ ಸಾಹೇಬರು ಸಮಾಜದಲ್ಲಿ ತರಲು ಬಯಸಿದ ಸುಧಾರಣೆಗಳು ಇಂದಿಗೂ ಪೂರ್ಣವಾಗಿ ಈಡೇರಿಕೆಯಾಗದಿರುವುದು ದುರಾದೃಷ್ಟಕರ ಎಂದು ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗದಲ್ಲಿರುವ ಬಾಬಾ ಸಾಹೇಬರ ಪುತ್ಥಳಿಗೆ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನವನ್ನು ವಿಶ್ವದಂತೆಯೇ ದೇಶಾದ್ಯಂತ ಹಾಗೂ ನಮ್ಮ ರಾಜ್ಯದಲ್ಲೂ ಶ್ರದ್ಧೆಯಿಂದ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ವಿಶ್ವಕ್ಕೆ ಜ್ಞಾನ ನೀಡಿದ, ದೇಶಕ್ಕೆ ಸಮಾನತೆ ನೀಡಿದ ಸಂವಿಧಾನವನ್ನು ರೂಪಿಸಿ ರಾಷ್ಟ್ರಕ್ಕೆ ಭದ್ರ ಬುನಾದಿಯನ್ನು ಕಟ್ಟಿಕೊಟ್ಟ ಬಾಬಾ ಸಾಹೇಬರನ್ನು ಸ್ಮರಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ಆದರೆ ಅವರು ಸಂವಿಧಾನದಲ್ಲಿ ಕಂಡುಕೊಂಡ ಆಶಯಗಳು, ಬಯಸಿದ ಸುಧಾರಣೆ ಗಳು, ತರಲು ಚಿಂತಿಸಿದ್ದ ಬದಲಾವಣೆಗಳು ಇಂದಿಗೂ ಸಾಕಷ್ಟು ಜಾರಿಯಾಗದೆ ಉಳಿದಿರುವುದು ವಿಷಾದನೀಯ ಎಂದರು.



ದೇಶದಲ್ಲಿ ಸ್ವಾತಂತ್ರ್ಯ, ಸೌಹಾರ್ದತೆ, ಪ್ರಜಾಪ್ರಭುತ್ವ ಬಲವಾಗಿರಬೇಕಾದರೆ ಅಸಮಾನತೆ, ದೌರ್ಜನ್ಯ, ಅನ್ಯಾಯಗಳಂತಹ ಕೆಡುಕುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು. ಆಗ ಮಾತ್ರ ಅಂಬೇಡ್ಕರ್ ಅವರ ಕನಸುಗಳು ನಿಜಾರ್ಥದಲ್ಲಿ ಸಾರ್ಥಕವಾಗಲಿವೆ ಎಂದು ಅಭಿಪ್ರಾಯ ಪಟ್ಟರು.

ಯಾವ ಸರ್ಕಾರವಾದರೂ, ಯಾವುದೇ ಜನ ಪ್ರತಿನಿಧಿಗಳಾದರೂ ಅಂಬೇಡ್ಕರ್ ಅವರ ಆಶಯಗಳನ್ನು ಈಡೇರಿಸುವ ಜವಾಬ್ದಾರಿ ಎಲ್ಲರ ಮೇಲೂ ಇದೆ. ಪ್ರತಿಯೊಬ್ಬರೂ ಆತ್ಮ ಪರಿಷ್ಕರಣೆ ಮಾಡಿಕೊಂಡು ಕಾರ್ಯನಿರ್ವಹಿಸಬೇಕಾದ ಸಮಯ ಇದು ಎಂದು ಕರೆ ನೀಡಿದರು.

ಶಾಸಕ ಸಿಮೆಂಟ್ ಮಂಜುರವರು ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಮೊದಲು ಅಂಬೇಡ್ಕರ್ ಪರಿನಿಬ್ಬನದ ದಿನದ ಅಂಗವಾಗಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಕಾರ್ಯಕ್ರಮಕ್ಕೆ ತೆರಳಿದರು. ಪುರಸಭೆಯ ಮಾಜಿ ಅಧ್ಯಕ್ಷ ಕಾಡಪ್ಪ, ಅಬ್ಬು ಆನೆ ಮಹಲ್, ಸಬ್ ಭಾಸ್ಕರ್, ವಡೂರು ಗಿರೀಶ್, ರಮೇಶ್ ನಿರ್ವಾಣಯ್ಯ, ಬೆಳಗೂಡು ಬಸವರಾಜ್ ಸೇರಿ ಹಲವರು ಉಪಸ್ಥಿತರಿದ್ದರು.

### ಹಾಸನದ ಸ್ಥಾನಿಕ ಜಿಲ್ಲಾಧಿಕಾರಿಗಳ ಭೂ ದಾಖಲೆಗಳ ನಿರ್ದೇಶಕರ ನ್ಯಾಯಾಲಯದಲ್ಲಿ

ಆರ್.ಎ: 392/2025

ಅಪೀಲುದಾರರು : ಹೆಚ್.ಪಿ.ಗೋಪಾಲ ಬಿನ್ ಹೆಚ್.ಕೆ.ಪುಟ್ಟೇಗೌಡ
135, 2ನೇ ಹಂತ, 7ನೇ ಮೇನ್, ಎಲ್.ಐ.ಜಿ.
ಕೆ.ಹೆಚ್.ಬಿ. ಕಾಲೋನಿ, ಬೆಂಗಳೂರು ಉತ್ತರ.

**ವಿರುದ್ಧ**

ರೆಸ್ಪಾಂಡೆಂಟರು : 2) ಜಯಲಕ್ಷ್ಮಮ್ಮ ಕೋಂ ಸಿ ಚನ್ನೇಗೌಡ
3) ಟಿ.ಸಿ.ಅಂಬರೀಶ ಬಿನ್ ಡಿ.ಸಿ.ಚನ್ನಬಸಪ್ಪ
4) ಹೆಚ್.ಕೆ.ನಾಗಣ್ಣ ಬಿನ್ ಲೇಟ್ ಕಾಳೇಗೌಡ
5)ಕೆ.ಬಿ.ಮಹೇಶ ಬಿನ್ ಲೇಟ್ ಬಶೆಟ್ಟಿ ಉ//ಬಸಶೆಟ್ಟಿ
6) ಕೆ.ಬಿ.ಚನ್ನಬಸವ ಬಿನ್ ಲೇಟ್ ಬ ಶೆಟ್ಟಿ ಉ//ಬಸಶೆಟ್ಟಿ
7) ರಾಜಶೇಖರ ಬಿನ್ ಲೇಟ್ ಬಶೆಟ್ಟಿ ಉ//ಬಸಶೆಟ್ಟಿ
8) ಸಿ.ಎಸ್. ದಾಕ್ಷಾಯಿಣಿ ಬಿನ್ ಲೇಟ್ ಬಶೆಟ್ಟಿ ಉ// ಬಸಶೆಟ್ಟಿ
9) ಬಿ. ರವಿ ಬಿನ್ ಲೇಟ್ ಬಶೆಟ್ಟಿ ಉ// ಬಸಶೆಟ್ಟಿ
10) ಜವರೇಗೌಡ ಬಿನ್ ಹೆಗ್ಗಡಿ ಕಳಸೇಗೌಡ
11) ಗೌರಮ್ಮ ಕೋಂ ಲೇಟ್ ಸೋಮಶೇಖರ
12) ಮಲ್ಲಮ್ಮ ಕೋಂ ಮೈಲಾರಿಗೌಡ
13) ಕೆ.ಎಂ.ದೇವರಾಜು ಬಿನ್ ಮರೀಗೌಡ
14) ಹುಲಿಗೌಡ ಬಿನ್ ಲೇಟ್ ಮಾಯಿಗೌಡ
15) ನಾಗರಾಜ ಬಿನ್ ಲೇಟ್ ಮಾಯಿಗೌಡ
16) ಜಯರಾಮ ಬಿನ್ ಹುಲಿಗೌಡ
17) ಶಿವಲಿಂಗೇಗೌಡ ಬಿ.ಹೆಚ್. ಬಿನ್ ಹುಲೀಗೌಡ
18) ಜಯಲಿಂಗ ಬಿ.ಹೆಚ್. ಬಿನ್ ಹುಲೀಗೌಡ
19) ಮಹೇಶ ಬಿ.ಹೆಚ್. ಬಿನ್ ಹುಲಿಗೌಡ
20) ಮಂಜುನಾಥ ಬಿ.ಜೆ. ಬಿನ್ ಜವರಯ್ಯ
21) ಸುರೇಶ ಬಿ.ಎನ್. ಬಿನ್ ನಾಗರಾಜ ಉ// ಹುಚ್ಚೇಗೌಡ
22) ಹರೀಶ ಕುಮಾರ ಬಿ.ಎನ್. ಬಿನ್ ನಾಗರಾಜ ಉ// ಹುಚ್ಚೇಗೌಡ
23) ಕಳಸಮ್ಮ ಕೋಂ ಮಾಯಿಗೌಡ
24) ರೂಪ ಕೋಂ ದೇವರಾಜ
2 ರಿಂದ 24 ರೆಸ್ಪಾಂಡೆಂಟರ ವಿಳಾಸ
ಕೋಟವಾಳು ಗ್ರಾಮ, ರಾಮನಾಥಪುರ ಹೋಬಳಿ,
ಅರಕಲಗೂಡು ತಾಲ್ಲೂಕು.

**ಪ್ರಕಟಣೆ**

ಅಪೀಲುದಾರರು ಈ ಮೇಲ್ಕಂಡ ಅಪೀಲನ್ನು ರೆಸ್ಪಾಂಡೆಂಟರ ವಿರುದ್ಧ ಹಾಸನದ ಸ್ಥಾನಿಕ ಜಿಲಾಧಿಕಾರಿಗಳ ಭೂ ದಾಖಲೆಗಳ ನಿರ್ದೇಶಕರ ನ್ಯಾಯಾಲಯದಲ್ಲಿ ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ಕೋಟುವಾಳು ಗ್ರಾಮದ ಸರ್ವೆ ನಂ.5 ರಲ್ಲಿ ರಿ. ಸರ್ವೆ ನಂ: 1,2,3,4,5,6,7,8,9,10,11,12,13,14 ಎಂದು ಮಾಡಿರುವ ಹಿಸ್ಸಾ ಪೋಡಿ ದುರಸ್ತಿ ಆದೇಶವನ್ನು ರದ್ದುಪಡಿಸುವಂತೆ ಕೋರಿ ಮೇಲ್ಮನವಿ ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣವು ದಿನಾಂಕ: 15-12-2025 ರಂದು ಮಧ್ಯಾಹ್ನ 3-00 ಗಂಟೆಗೆ ನಿಗಧಿ ಆಗಿದ್ದು ಸದರಿ ಕೇಸಿಗೆ ಉತ್ತರಿಸುವುದಕ್ಕಾಗಿ ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಬೇಕೆಂದು ಈ ಮೂಲಕ ನಿಮಗೆ ಸಮನ್ಸ್ ಹೊರಡಿಸಲಾಗಿದೆ ಮತ್ತು ನಿಮ್ಮ ಹಾಜರಾತಿಗಾಗಿ ಗೊತ್ತು ಪಡಿಸಲಾದ ದಿನದಂದು ಕೇಸಿನ ಅಂತಿಮ ವಿಲೇಗಾಗಿ ಗೊತ್ತು ಪಡಿಸಲಾಗಿರುವುದರಿಂದ ಆ ದಿನದಂದು ನಿಮ್ಮ ಪ್ರತಿವಾದ ಸಮರ್ಥನೆಗಾಗಿ ಅದಕ್ಕೆ ಸಂಬಂಧಪಟ್ಟ ದಾಸ್ತವೇಜು ಮತ್ತು ಸಾಕ್ಷಿದಾರರ ಸಾಕ್ಷ್ಯವನ್ನು ಹಾಜರು ಪಡಿಸಲು ಸಿದ್ಧರಿರತಕ್ಕದ್ದು.

ದಿನಾಂಕ: 04-12-2025 ರಂದು ಸಹಿ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಅರ್ಜಿದಾರರ ಪರ ವಕೀಲರು
ಡೀಲಾಕ್ಷ ಕುಮಾರ್ ಬಿ.ಹೆಚ್.
ವಕೀಲರು
ಶ್ರೀ ಅನ್ನಪೂರ್ಣೇಶ್ವರಿಕಾಂಪ್ಲೆಕ್ಸ್,
ಭೀಮಯ್ಯ ಕಾಲೋನಿ, ಹಾಸನ.

ಜಿಲ್ಲಾಧಿಕಾರಿಗಳ ತಾಂತ್ರಿಕ
ಸಹಾಯಕರು ಹಾಗು ಪದನಿಮಿತ ಭೂ
ದಾಖಲೆಗಳ ಉಪ ನಿರ್ದೇಶಕರು ಹಾಸನ
ಜಿಲ್ಲೆ, ಹಾಸನ.

ನೆಲ ಮಹಡಿಯಿಂದ ಮೇಲೇಳದ ಕಟ್ಟಡ | 1.50 ಕೋಟಿ ರೂ. ಬಿಡುಗಡೆ

# 8 ವರ್ಷವಾದರೂ ಪೂರ್ಣವಾಗದ ಅಂಬೇಡ್ಕರ್ ಭವನ

-ರವಿ ದುಮ್ಮಿ

• ಪ್ರಜೋದಯ ವರದಿ

**ಅರಕಲಗೂಡು:** ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ 8 ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಳ್ಳದೆ ಇರುವುದು ಆಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಹಾಸನ ಜಿಲ್ಲೆಯಲ್ಲಿಯೇ 3.50 ಕೋಟಿ ರೂ. ವೆಚ್ಚದ ಮಾದರಿ ಭವನ ನಿರ್ಮಿಸಲು ಉದ್ದೇಶಿಸಿ 2017ರ ಡಿ.11ರಂದು ಅಂದಿನ ಜಿಲ್ಲಾ ಉಸ್ತುವಾರಿ ಸಚಿವರು ಹಾಗು ಹಾಲಿ ಶಾಸಕ ಎ.ಮಂಜು ಅವರು ಭೂಮಿಪೂಜೆ ನೆರವೇರಿಸಿದ್ದರು. 2018ರ ವಿಧಾನಸಭಾ ಚುನಾವಣೆ ಒಳಗೆ ನೂತನ ಭವನವನ್ನು ಲೋಕಾರ್ಪಣೆಗೊಳಿಸುವ ಭರವಸೆಯನ್ನು ನೀಡಿದ್ದರು. 1.50 ಕೋಟಿ ರೂ. ಹಣ ಆರಂಭಿಕ ಕಂತಾಗಿ ಬಿಡುಗಡೆಗೊಂಡಿತ್ತು. ಆದರೆ ಕಾಮಗಾರಿಯ ನಿರ್ವಹಣೆ ಹೊತ್ತಿದ್ದ ಸರ್ಕಾರಿ ಸ್ವಾಮ್ಯದ ಲ್ಯಾಂಡ್ ಆರ್ಮಿ ಸಂಸ್ಥೆ ಆರಂಭದಲ್ಲಿನ ಕಾಮಗಾರಿಯನ್ನು ತಾಂತ್ರಿಕ ಮತ್ತು ಮೂಲ ನಕ್ಷೆ ಪ್ರಕಾರ ಕೆಲಸವನ್ನು ಕೈಗೊಳ್ಳದ ಹಿನ್ನಲೆ ಇನ್ನೂ ಕೂಡ ನೆಲ ಮಹಡಿಯ ಹಂತದಲ್ಲಿಯೇ ಕುಂಟುತ್ತಾ ಸಾಗಿದೆ.



ಈ ಹಿಂದೆ ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಳೆಯ ಭವನ ಅಂಬೇಡ್ಕರ್ ಭವನವನ್ನು ನೆಲಸಮಗೊಳಿಸಿ ಹೊಸ ಭವನ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. ಆದರೆ ದಲಿತಪರ ಸಂಘಟನೆಗಳನು ನೂತನ ಭವನ ಕಾಮಗಾರಿಯನ್ನು ವಿರೋಧಿಸಿ 42 ದಿನಗಳ ಕಾಲ ಭವನ ದೆದುರು ಅಹೋರಾತ್ರಿ ಧರಣಿ ಕೂಡ ನಡೆಸಿದ್ದರು. ಪಟ್ಟಣದಲ್ಲಿ ನಿರ್ಮಾಣಗೊಳ್ಳುವ ಅಂಬೇಡ್ಕರ್ ಭವನ ಜ್ಞಾನಾರ್ಜನೆ ಕೇಂದ್ರ ಆಗಬೇಕಿದೆ. ಭವನದಲ್ಲಿ ಗ್ರಂಥಾಲಯ. ಕಂಪ್ಯೂಟರ್ ಕೇಂದ್ರಕ್ಕೆ ಅವಕಾಶ ಮಾಡಿಕೊಡಬೇಕು. ಅದರಿಂದ ನಿಜವಾದ ಸಂವಿಧಾನದ ಆಶಯ ಈಡೇರುತ್ತದೆಂದು ಅಂದಿನ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಅವರು ಆಶಯ ವ್ಯಕ್ತಪಡಿಸಿದ್ದರು.

**ಕುಂಠಿತಕ್ಕೆ ರಾಜಕೀಯ ಕಾರಣ**

2018ರ ವಿಧಾನಸಭಾ ಚುನಾವಣೆಯಲ್ಲಿ ಎ.ಮಂಜು ಅವರು ಸೋಲನ್ನು ಕಂಡರು. ಎ.ಟಿ.ರಾಮಸ್ವಾಮಿ ಶಾಸಕರಾಗಿ ಆಯ್ಕೆಗೊಂಡರು. ಬದಲಾದ ರಾಜಕೀಯ ಸನ್ನಿವೇಶಗಳಿಂದ ಭವನದ ಕಾಮಗಾರಿ ಎರಡು ವರ್ಷಗಳ ಕಾಲ ನನೆಗುದಿಗೆ ಬಿದ್ದಿತು. 2023ರ ಜನವರಿಯಲ್ಲಿ ಆರ್‌ಸಿಸಿ ಹಾಗು ನೆಲ ಹಾಸಿಗೆಗೆ ಟೈಲ್ಸ್ ಕೆಲಸ ಪೂರ್ಣಗೊಂಡಿದೆ. ಇಷ್ಟು ಕಾಮಗಾರಿಗೆ 1.50 ಕೋಟಿ ರೂ. ವೆಚ್ಚವಾಗಿದ್ದು, ಇನ್ನೂ ಎರಡು ಕೋಟಿ ರೂ. ವೆಚ್ಚದ ಕೆಲಸ ಅನುದಾನವಿಲ್ಲದೇ ನೆಲಕಚ್ಚಿತ್ತು.

ಕ್ಷೇತ್ರದಲ್ಲಿ 2018 ರಿಂದ 2023ರ ಏಪ್ರಿಲ್ ಅವಧಿಯಲ್ಲಿ ಅಂಬೇಡ್ಕರ್ ಭವನದ ಮುಂದುವರಿದ ಕಾಮಗಾರಿಗೆ ಹಣ ಬಿಡುಗಡೆಯಾಗಲಿಲ್ಲ. ಈ ಸಂಬಂಧ ಶಾಸಕರಾಗಿದ್ದ ಎ.ಟಿ. ರಾಮಸ್ವಾಮಿ ಅವರು ಸರ್ಕಾರದ ಮೇಲೆ ಒತ್ತಡ ತರದ ಹಿನ್ನಲೆ ಕಾಮಗಾರಿ ನನೆಗುದಿಗೆ ಬೀಳಲು ಕಾರಣ ಎಂದು ದಲಿತ ಸಂಘಟನೆಗಳ ಮುಖಂಡರ ಆಕ್ಷೇಪವಾಗಿದೆ.

**ಕಳಪೆ ಕಾಮಗಾರಿ**

ಈಗಾಗಲೇ ನಿರ್ವಹಿಸಿರುವ ಭವನ ಕಾಮಗಾರಿ ಕಳಪೆಯಿಂದ ಕೂಡಿರುವ ಪರಿಣಾಮ ನೆಲ ಅಂತಸ್ತಿನಲ್ಲಿನ ಕೊಠಡಿಗಳಲ್ಲಿ ಮಳೆ ನೀರು, ಜಲ ನೀರು ಸಂಗ್ರಹವಾಗುತ್ತಿದೆ. ಭವನ ನಿರ್ಮಾಣ ಜಾಗ ತಗ್ಗು ಪ್ರದೇಶದಿಂದ ಕೂಡಿರುವ ಕಾರಣ ಮಳೆಗಾಲದಲ್ಲಿ ಜಲ ಉದ್ಭವಗೊಳ್ಳುತ್ತದೆ. ಈ ನೀರು ಮುಂದೆ ಹೋಗಲು ಚರಂಡಿ ನಿರ್ಮಿಸಿಲ್ಲದ ಪರಿಣಾಮ ಕಟ್ಟಡದ ಒಳಗೆ ಬರುತ್ತಿದೆ. ಆರ್‌ಸಿಸಿ ಕೂಡ ಕೆಲವು ಕಡೆ ನೀರು ಸೋರುರುತ್ತಿದೆ. ಈಗಾ ಗಲೇ ನೆಲಹಾಸಿಗೆಗೆ ಅಳವಡಿಸಲಾಗಿ ರುವ ಗ್ರಾನೈಟ್, ಟೈಲ್ಸ್‌ಗಳು ಕಳಪೆಯಿಂದ ಕೂಡಿ ರುವ ಪರಿಣಾಮ ಒಡೆಯಲಾರಂಭಿಸಿವೆ. ಸ್ಥಳೀಯರು ಕುರಿ, ಮೇಕೆ ಕಟ್ಟಲು, ಹಸಿ ಶುಂಠಿ ಒಣಗಿಸಲು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಪ್ರಮುಖವಾಗಿ ಶೌಚಕೇಂದ್ರವಾಗಿ ಬಳಕೆ ಮಾಡುತ್ತಿರುವುದು ಕಂಡುಬದಿದೆ.

**ಅಂಬೇಡ್ಕರ್ ಭವನ ನಿರ್ಮಾಣ ನನ್ನ ಕನಸು. ಅದನ್ನು ಪೂರ್ಣಗೊಳಿಸುವ ಜವಾಬ್ದಾರಿ ನನ್ನದಾಗಿದೆ. 3.50 ಕೋಟಿ ರೂ. ವೆಚ್ಚದ ಕಾಮಗಾರಿ ಇದಾಗಿದೆ. ಅಂದು ನಾನೇ ಆರಂಭಿಸಿದ್ದೆ. ಇದು ನಾನೇ ಅದನ್ನು ಪೂರ್ಣಗೊಳಿಸುವೆ. ತಹಶೀಲ್ದಾರ್ ಕಚೇರಿ ಬಳಿ ನಾನೇ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿದ್ದೆ, ಗೋಪುರ ಕೆಲಸ ನಾನೇ ಪೂರ್ಣಗೊಳಿಸುತ್ತಿರುವೆ. ಸರ್ಕಾರ 1.50 ಕೋಟಿ ರೂ. ಬಿಡುಗಡೆ ಮಾಡಿದೆ. ಅದರ ಮೊದಲ ಕಂತಾಗಿ 37.50 ಲಕ್ಷ ರೂ. ಹಣ ಬಂದಿದೆ. ಕೂಡಲೇ ಕೆಲಸ ಆರಂಭಿಸಿ ನಿಗದಿತ ಅವಧಿಯಲ್ಲಿ ಭವನವನ್ನು ಲೋಕಾರ್ಪಣೆ ಮಾಡುವೆ.**

**-ಎ.ಮಂಜು, ಶಾಸಕ**

**ಅನುದಾನ ಬಿಡುಗಡೆಗೆ ಪ್ರಸ್ತಾವನೆ**

2023ರ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಗೊಂಡ ಎ.ಮಂಜು ಅವರು ತಾವೇ ಆರಂಭಿಸಿ ನನೆಗುದಿಗೆ ಬಿದ್ದಿ ರುವ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸುವ ಸಲುವಾಗಿ ವಿಧಾನಸಭಾ ಅಧಿವೇಶನದಲ್ಲಿ ಭವನ ಕಾಮಗಾರಿ ಪೂರ್ಣ ಗೊಳಿಸಲು 3.50 ಕೋಟಿ ರೂ. ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ ದ್ದರು. ಅಷ್ಟೊಂದು ಹಣ ವನ್ನು ತಾಲ್ಲೂಕು ಭವನಗಳಿಗೆ ಕೊಡಲು ಬರುವುದಿಲ್ಲ. 1.50 ಕೋಟಿ ರೂ. ಬಿಡುಗಡೆ ಮಾಡು ವುದಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ. ಮಹಾದೇವಪ್ಪ ಭರವಸೆ ನೀಡಿದ್ದರು. 2024ರ ಬಳಿಕ ಶಾಸಕ ಎ.ಮಂಜು ಅವರು ಅಧಿಕಾರಿಗಳ ಸಭೆ ನಡೆಸಿ ಕೂಡಲೇ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸುವ ಸಲುವಾಗಿ ಅಂದಾಜು ಪಟ್ಟಿ ಸಲ್ಲಿಸಬೇಕೆಂದು ತಾಕೀತು ಮಾಡಿದ್ದರು.

**ಟೆಂಡರ್ ಪ್ರಕ್ರಿಯೆ ಆರಂಭ:** ಅಂಬೇಡ್ಕರ್ ಭವನ ಮುಂದುವರಿದ ಕಾಮಗಾರಿ ಕೈಗೊಳ್ಳಲು 37.50 ಲಕ್ಷ ರೂ. ಬಿಡುಗಡೆಯಾ ಗಿದೆ. ಮೊದಲ ಅಂತಸ್ತಿನಲ್ಲಿ ಕೈಗೊಳ್ಳುವ ಕಾಮಗಾರಿ ಕುರಿತು ಟೆಂಡರ್ ಪ್ರಕ್ರಿಯೆ ಆರಂಭಗೊಂಡಿದೆ. ಕೆಲವು ವಾರಗಳಲ್ಲಿ ಮುಂದುವರಿದ ಕಾಮಗಾರಿ ಆರಂಭ ಗೊಳ್ಳಲಿದೆ ಎಂದು ಜಿಲ್ಲಾ ಪಂಚಾಯಿತಿ ಎಇಇ ಧನಲಕ್ಷ್ಮಿ ತಿಳಿಸಿದರು.



C M Y K C M Y K C M Y K C M Y K